For Private Circulation Only

ECHOES INDIA

ಶ್ರೀ ರಾಮಚಂದ್ರ ಮಿಷನ್®

ಮಾರ್ಚ್ 2014 ಸಂಪುಟ 7 ಸಂಚಿಕೆ 2



# ಪೂಜ್ಯ ಲಾಲಾಜಿ ಮಹಾರಾಜರ 141ನೇ ಜಯಂತಿ ಫೆಬ್ರುವರಿ 1–4, 2014

## ಮಣಪಾಕ್ಕಂ

ಗುರುಗಳು ಫೆಬ್ರುವರಿ 2ರಂದು ಮುಂಜಾನೆ 7.30ಕ್ಕೆ ಸತ್ಸಂಗವನ್ನು ನಡೆಸಿಕೊಟ್ಟರು. ಅವರು ತನ್ನ ಗಾಲಿಕುರ್ಚಿಯಲ್ಲಿ ಧ್ಯಾನಮಂದಿರವನ್ನು ಪ್ರವೇಶಿಸುತ್ತಿದ್ದಂತೆ, ಅಲ್ಲಿ ಸೇರಿದ್ದ ಸುಮಾರು 4000 ಅಭ್ಯಾಸಿಗಳು ಸ್ವಯಂಸ್ಫೂರ್ತಿಯಿಂದ ಕರತಾಡನ ಮಾಡಲಾರಂಭಿಸಿದರು. ಸುಮಾರು 1 ಗಂಟೆ ಐದು ನಿಮಿಷ ನಡೆದ ಸತ್ಸಂಗದ ತರುವಾಯ, ಗುರುಗಳು ಒಂದು ಭಾಷಣವನ್ನು ನೀಡಿದರು. ಅದರ ಮುಖ್ಯ ವಸ್ತು, ‘ಇಲ್ಲಿ ಮತ್ತು ಈಗಲೇ’ ಎಂಬುದಾಗಿತ್ತು. ಸಮಯ ಎಂಬುದು ತೀರಾ ಅಲ್ಪವಿದೆ, ಆದುದರಿಂದ ಅಭ್ಯಾಸಿಗಳು ಸಮಯವನ್ನು ವ್ಯರ್ಥ ಮಾಡದೆ ನಿತ್ಯಸಾಧನೆಯಲ್ಲಿ ತಮ್ಮ ಗಮನ ಕೇಂದ್ರೀಕರಿಸಬೇಕು ಎಂದರು. ಮುಕ್ತಿಗೆ ಹಿಂದೆ ಸಾವಿರಾರು ವರ್ಷಗಳು ಬೇಕಾಗಿದ್ದರೆ ಸಹಜಮಾರ್ಗದ ಮೂಲಕ ಯಾವುದೇ ವ್ಯಕ್ತಿಗೆ ಅದು ಒಂದು ಜನ್ಮದ ಅವಧಿಯಲ್ಲೇ ಸಾಧ್ಯವಾಗುತ್ತದೆ ಎಂದು ಅವರು ಹೇಳಿದರು.

ಸಾಯಂಕಾಲದ ಸತ್ಸಂಗಾನಂತರ, ಚೆನ್ನೈಯ ಯುವಜನರು ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಪ್ರಸ್ತುತಪಡಿಸಿದರು. 4ನೇ ತಾರೀಕು ಬಸಂತಪಂಚಮಿಯಂದು ಪೂರ್ವಾಹ್ನ 7.30ಕ್ಕೆ ಗುರುಗಳು ಸತ್ಸಂಗವನ್ನು ನಡೆಸಿದರು. ತದನಂತರ ಸೋ. ಮಾಧುರಿಯವರು ‘ವ್ಹಿಸ್ಪರ್ಸ್’ ನಿಂದ ಸಂದೇಶವೊಂದನ್ನು ಓದಿದರು. ಆಮೇಲೆ ಸೋ. ಪಿ.ಆರ್. ಕೃಷ್ಣರವರು ಮಾತನಾಡಿ ಗುರುಗಳ ಜೀವನದಲ್ಲಿನ ಕೆಲವು ಮುಖ್ಯ ಘಟನೆಗಳನ್ನು ತಿಳಿಯಪಡಿಸಿದರು. 1964ನ ಬಸಂತ್ ಸಮಯದಲ್ಲಿ ಮಿಷನ್ನಿಗೆ ಸೇರಿದ ಗುರುಗಳು ಅಭ್ಯಾಸಿಯಾಗಿ ಐವತ್ತು ವರ್ಷಗಳನ್ನು ಸಂಪೂರ್ಣಗೊಳಿಸಿದ್ದಾರೆ. ಭಾಷಣದ ನಂತರ ಗುರುಗಳು ಕೇಕನ್ನು ತುಂಡು ಮಾಡಿದರು. ಅವರು ಧ್ಯಾನಮಂದಿರದಿಂದ ಹೊರಹೋಗುತ್ತಿದ್ದಂತೆ ರಶ್ಯಾದ ಜೋಡಿಯೊಂದು ಅವರನ್ನು ಅಭಿವಾದಿಸಿತು. ಮತ್ತು ಗುರುಗಳು ಅವರ ವಿವಾಹವನ್ನು ನೆರವೇರಿಸಿದರು. ನಂತರ ಗುರುಗಳು ತಾತ್ಕಾಲಿಕ ಉಪಾಹಾರಮಂದಿರವನ್ನು ಉದ್ಘಾಟನೆ ಮಾಡಲೆಂದು ತೆರಳಿದರು. ಧ್ಯಾನಮಂದಿರದಲ್ಲಿ ಸೋ. ಗುರುಪ್ರೀತ್‌ಚರಣ್ ಅವರು ಕೆಲವು ಭಜನೆಗಳನ್ನು ಹಾಡಿದರು. ಉತ್ಸವದ ಕೊನೆಯಾಗಿ ಸಾಯಂಕಾಲ 6.30ಕ್ಕೆ ಗಣೇಶ್ ಮತ್ತು ಕುಮರೇಶ್ ಸೋದರರು ಸಂಗೀತ ಕಚೇರಿಯನ್ನು ನಡೆಸಿಕೊಟ್ಟರು. ಅವರಿಗೆ ಸೋ. ಜಯಂತಿಯವರು ವೀಣಾವಾದನದಲ್ಲಿ ಸಾಥಿಯಾದರು.













## ತಿರುಪ್ಪೂರ– ಫೆಬ್ರುವರಿ 1– 4, 2014

ದೀರ್ಘಕಾಲದ ಬಳಿಕ, ಪೂಜ್ಯ ಲಾಲಾಜಿ ಮಹಾರಾಜರ ಜನ್ಮದಿನೋತ್ಸವದ ಸಲುವಾಗಿ ಅಂತರಾಷ್ಟ್ರೀಯ ಮಟ್ಟದ ಭಂಡಾರವೊಂದು ಏರ್ಪಟ್ಟಿತ್ತು. ನಾಲ್ಕು ದಿನಗಳ ಈ ಭಂಡಾರವು ಫೆಬ್ರುವರಿ 1ರಿಂದ ಚಾಂದ್ರಮಾನ ಬಸಂತಪಂಚಮಿಯ ದಿನ ಫೆಬ್ರುವರಿ 4ರ ವರೆಗೆ ನಡೆಯಿತು. ಅಭ್ಯಾಸಿಗಳು ಭಂಡಾರದ ಮೊದಲು ಸಿದ್ಧರಾಗಿದ್ದು, ಸಾದ್ಯಂತವಾಗಿ ಕೆಲಸಮಾಡಿ, ಅದರ ಮುಗಿತಾಯದಲ್ಲಿ ನೆರವಾದರು. ತಿರುಪ್ಪೂರದಲ್ಲಿ ನಾವು ನಿರೀಕ್ಷಿಸುತ್ತ ಬಂದಂತೆ ಈ ಸಂಘಟನೆಯು ಉನ್ನತ ಮಟ್ಟದ್ದಾಗಿತ್ತು. 2ನೇ ತಾರೀಖಿನ ಸುಮಾರಿಗೆ ಅಭ್ಯಾಸಿಗಳ ಸಂಖ್ಯೆಯು 1,500 ಸ್ವಯಂಸೇವಕರು ಮತ್ತು 1,729 ಮಕ್ಕಳು ಸೇರಿದಂತೆ ಸುಮಾರು 16,500ಕ್ಕೆ ಏರಿತ್ತು.

ಅದರಲ್ಲಿ ಅಲ್ಲಿ ಪ್ರತಿದಿನ ಪೂರ್ವಾಹ್ನ 6.30ಕ್ಕೆ, 11.30ಕ್ಕೆ ಮತ್ತು ಸಾಯಂಕಾಲ 5.00 ಗಂಟೆಗೆ ಎಂದು ಮೂರು ಸತ್ಸಂಗಗಳಿದ್ದವು. ಸತ್ಸಂಗಗಳ ನಂತರ ಸೋ. ಕಮಲೇಶ್‌ರವರು ಐದು ಭಾಷಣಗಳನ್ನಿತ್ತರು, ಅವುಗಳಲ್ಲೊಂದು ಪ್ರಶಿಕ್ಷಕರಿಗಾಗಿ ಇತ್ತು. ಈ ಭಾಷಣಗಳು ಅಭ್ಯಾಸಿಗಳನ್ನು ತಮ್ಮ ಸಾಧನೆಯಲ್ಲಿ ಇನ್ನಷ್ಟು ಆಳವಾಗಿ ಹೋಗಲು, ತಮ್ಮ ತಿಳಿವಳಿಕೆಗಳನ್ನು ಸುಧಾರಿಸಿಕೊಂಡು, ಮುಖ್ಯವಾದುದರೆಡೆಗೆ ಗಮನ ಕೇಂದ್ರೀಕರಿಸುವಂತೆ ಮಾಡಲು ನೆರವಾದವು.

ಉತ್ಸವದ ಪ್ರತಿಯೊಂದು ಅಂಶದಲ್ಲೂ ಗುರುಗಳ ಆಧ್ಯಾತ್ಮಿಕ ಸಾನ್ನಿಧ್ಯದ ಸಂವೇದನೆಯಾಗುತ್ತಿತ್ತು. ಗುರುಗಳಿಗೆ ಅಲ್ಲಿ ಭೌತಿಕವಾಗಿ ಉಪಸ್ಥಿತರಿರುವುದು ಅಸಾಧ್ಯವಾಗಿದ್ದರೂ ಗುರುಗಳು 2ನೇ ತಾರೀಕಿನಂದು ಬೆಳಗಿನ ಸತ್ಸಂಗಾನಂತರ ಚೆನ್ನೈಯಿಂದ ವೆಬ್‌ಲಿಂಕ್ ಮೂಲಕ ಸಂಪರ್ಕಿಸಲು ಶಕ್ತರಾಗಿ ಅಲ್ಲಿ ಸೇರಿದ್ದವರನ್ನು ಉದ್ದೇಶಿಸಿ ಮಾತನಾಡಿದರು. ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾಗಿ ಸೋ. ಕಮಲೇಶ್‌ರವರು, ಉತ್ಸವತಾಣದ ಸೂಕ್ಷ್ಮ ಕಂಪನಕ್ಕೆ ತಂತಮ್ಮ ನಡವಳಿಕೆಯನ್ನು ಹೊಂದಿಸಿಕೊಂಡು ಸ್ವಾಭಾವಿಕ ಶಿಸ್ತಿನಲ್ಲಿ ಹೊರಹೊಮ್ಮುವಂತಾಗಲು ಪ್ರತಿಯೊಬ್ಬರನ್ನೂ ಪ್ರೋತ್ಸಾಹಿಸಿದರು.

2ನೇ ತಾರೀಕಿನಂದು, ಬೆಳಗಿನ 6.45ರ ಸತ್ಸಂಗಾನಂತರ ಸೋ. ಕಮಲೇಶ್‌ರವರು ನಾಲ್ಕು ವಿವಾಹಗಳನ್ನು ನೆರವೇರಿಸಿದರು ಮತ್ತು ಫೆಬ್ರುವರಿ 1, 2014ರಂದು ಪಡೆದ ವ್ಹಿಸ್ಪರ್ಸ್ ಸಂದೇಶವನ್ನು ಓದಿದರು. ಕೆಲವು ಹೊಸ ಪ್ರಕಾಶನಗಳು ಮತ್ತು ಛಾಯಾಚಿತ್ರಗಳ ಬಿಡುಗಡೆಯ ಕಾರ್ಯಕ್ರಮ ನಡೆಯಿತು. ತದನಂತರ ಸೋ. ಗುರುಪ್ರೀತ್ ಮತ್ತು ಪೀಯೂಶ್ ಕೆಲವು ಭಜನೆಗಳನ್ನು ಹಾಡಿದರು.

ಸೋ. ಕಮಲೇಶ್ ತನ್ನ ಮೊದಲ ಭಾಷಣದಲ್ಲಿ ಲಾಲಾಜಿಯವರ 'ಸಂಭಾಷಣೆಯ ತತ್ವಗಳ'ನ್ನು ಓದಿದರು. ಅದರಲ್ಲಿ ಲಾಲಾಜಿಯವರು, ನಮ್ಮ ಸಂಭಾಷಣೆಯ ಶೈಲಿಯು ನಮ್ಮ ಮನಸ್ಸಿನ ಸಮಸ್ಥಿತಿ ಮತ್ತು ನಮ್ಮ ಹೃದಯದ ಪರಿಶುದ್ಧತೆ ಮತ್ತು ಚಾರಿತ್ರ್ಯದ ಪ್ರತಿಫಲನವಾಗಿರಬಲ್ಲುದು ಎಂಬುದನ್ನು ಗಮನಿಸುವಂತೆ ಒತ್ತಿ ಹೇಳುತ್ತಾರೆ.

ಮುಂದಿನ ಭಾಷಣಗಳಲ್ಲಿ ಸೋ. ಕಮಲೇಶ್‌ರವರು ಸೂಕ್ತ ರೀತಿಯಲ್ಲಿ ಕ್ರಮಬದ್ಧ ಸಾಧನೆಯ ಪ್ರಾಮುಖ್ಯತೆಯನ್ನು ಮನದಟ್ಟು ಮಾಡಿದರು. ಅವರು ನಮ್ಮ ನಿತ್ಯ ಜೀವನದಲ್ಲಿ ನಮ್ಮಲ್ಲಿ ಸಂಸ್ಕಾರಗಳನ್ನು ಉಂಟುಮಾಡುವಂಥವುಗಳಾದ, ನಾವು ಸಂವಹನ ಮಾಡುವ ವಿಧಾನ, ತೆಗೆದುಕೊಳ್ಳುವ ಆಹಾರ ಮುಂತಾದ ಅಂಶಗಳ ಬಗೆಗೆ ಮಾತನಾಡಿದರು. ಧ್ಯಾನಾನಂತರ ನಮ್ಮ ಸ್ಥಿತಿಯ ಬಗ್ಗೆ ಚಿಂತನೆ ನಡೆಸುವ ಮತ್ತು ಅದನ್ನು ಉಳಿಸಿಕೊಳ್ಳಲು ಪ್ರಯತ್ನಿಸುವ ಅಗತ್ಯವನ್ನು ಅವರು ಒತ್ತಿ ಹೇಳಿದರು. ಫೆಬ್ರುವರಿ 4ರ ಸಮಾರೋಪ ಭಾಷಣದಲ್ಲಿ ಅವರು ಪ್ರತಿಯೊಬ್ಬರನ್ನೂ ಅಭಿನಂದಿಸಿ, ಲಾಲಾಜಿ ಮಹಾರಾಜರು ಸುಸಂಘಟಿತ ಸತ್ಸಂಗಗಳನ್ನು ಆರಂಭಿಸಿದುದಕ್ಕೆ ಈ ಬಾರಿ ನೂರು ವರ್ಷ ಸಂಪನ್ನವಾಗಿದೆ ಎಂದರು. ತಾ. 2ರಂದು ಅವರು ಶಾಶ್ವತ ಧ್ಯಾನಮಂದಿರದಲ್ಲಿ ಪ್ರಶಿಕ್ಷಕರು, ಕೇಂದ್ರ ಸಂಚಾಲಕರು ಮತ್ತು ವಲಯ ಸಂಚಾಲಕರೆಲ್ಲರನ್ನೂ ಉದ್ದೇಶಿಸಿ ಮಾತನಾಡಿದರು ಮತ್ತು ಫೆಬ್ರುವರಿ 3ರಂದು ಉತ್ಸವದ ಎಲ್ಲ ಸ್ವಯಂಸೇವಕರಿಗಾಗಿ ಒಂದು ವಿಶೇಷ ಸತ್ಸಂಗವನ್ನು ನಡೆಸಿಕೊಟ್ಟರು.

ಸಂಘಟಕರು ಉತ್ಸವ ಆವಾರದೊಳಗೆಲ್ಲ ವಿವಿಧ ವಿಷಯಗಳ ಮೇಲೆ ಆಕರ್ಷಕವಾದ ಭಿತ್ತಿಪತ್ರಗಳನ್ನು ವಿನ್ಯಾಸಗೊಳಿಸಿದ್ದರು. ಧ್ಯಾನಮಂದಿರದ ಹೊರಗಡೆ ಲಾಲಾಜಿಯವರಿಗೆ ಸಂಬಂಧಿಸಿದಂತೆ ಒಂದು ಪ್ರಸ್ತುತಿಯಿತ್ತು. ಉಪಾಹಾರ ಮಂದಿರ ಮತ್ತು ಚಿಣ್ಣರ ಕೇಂದ್ರದ ಎದುರು ಚಾರಿತ್ರ್ಯನಿರ್ಮಾಣ ಮತ್ತು ಹತ್ತು ನಿಯಮಗಳ ಬಗೆಗೆ ಎದ್ದುಕಾಣುವಂಥ ಭಿತ್ತಿಚಿತ್ರಮಾಲಿಕೆಯಿತ್ತು. ಕುಟೀರದ ಪಕ್ಕದ ಜಾಗವನ್ನು ಮೌನಪ್ರದೇಶವೆಂದು ಪರಿಗಣಿಸಲಾಗಿದ್ದು ಅಲ್ಲಿ, ಅದನ್ನು ಹೃದಯಾಧಾರಿತ ಮೌನ ಪ್ರತಿಫಲನ ಮತ್ತು ಧ್ಯಾನಕ್ಕೆ ಹೇಗೆ ಬಳಸುವುದು ಎಂಬುದರ ಬಗೆಗಿನ ಭಿತ್ತಿಪತ್ರಗಳಿದ್ದವು.

ಮಕ್ಕಳ ಕೇಂದ್ರದಲ್ಲಿ, ಮಕ್ಕಳನ್ನು ವಯೋಮಾನಕ್ಕನುಗುಣವಾಗಿ ಪುಟಾಣಿಗಳು(0–6ವರ್ಷಗಳು), ಪುಟ್ಟ ನಕ್ಷತ್ರಗಳು(7–12 ವರ್ಷಗಳು) ಮತ್ತು ಎಳೆವಯಸ್ಕರು(13–17 ವರ್ಷಗಳು) ಎಂಬ ಮೂರು ಗುಂಪುಗಳನ್ನಾಗಿ ಮಾಡಲಾಗಿತ್ತು. ಪ್ರತಿಯೊಂದು ಗುಂಪಿಗೂ ನಿಗದಿತವಾದ ಸ್ವಯಂಸೇವಕರ ಸಮರ್ಪಿತ ತಂಡವೊಂದು ನೈತಿಕ ಮೌಲ್ಯಗಳನ್ನು ಅಳವಡಿಸುವ ಮತ್ತು ಸಹಜಮಾರ್ಗವನ್ನು ಅರ್ಥೈಸಿಕೊಳ್ಳುವ ವಿವಿಧ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಿಕೊಂಡಿದ್ದವು. ಅವರ ಪ್ರತಿಭೆಗಳನ್ನು ಪ್ರದರ್ಶಿಸುವಂಥ ಸಾಂಸ್ಕೃತಿಕ ಕಾರ್ಯಕ್ರಮವೊಂದನ್ನು ಅಲ್ಲಿ ಪ್ರಸ್ತುತಪಡಿಸಲಾಯಿತು.



## ಮಣಪಾಕ್ಕಂನಿಂದ ವಾರ್ತೆಗಳು

### ಡಿಸೆಂಬರ್ 2–14, 2013

**ಪ್ರಶಿಕ್ಷಕ ತರಬೇತಿ ವಿಚಾರಗೋಷ್ಠಿ:** ಈ ಹಿಂದಿನ ಎಖೋಸ್‌ನಲ್ಲಿ ತಿಳಿಸಿರುವಂತೆ, ಪ್ರಶಿಕ್ಷಕ ಅಭ್ಯರ್ಥಿಗಳ ಸುಮಾರು ಇಪ್ಪತ್ತು ಮಂದಿಯ ತಂಡಗಳನ್ನು, ತರಬೇತಿಗಾಗಿ ಮತ್ತು ಪ್ರಶಿಕ್ಷಕರನ್ನಾಗಿ ಮಾಡಲು ಮಣಪಾಕ್ಕಂ ಆಶ್ರಮಕ್ಕೆ ಕರೆಸಲಾಗಿದೆ. ಪ್ರತಿ ಬೆಳಿಗ್ಗೆ ಇವರನ್ನು ಒಳಗೆ ಕರೆಯಲಾಗುತ್ತಿತ್ತು ಮತ್ತು ಗುರುಗಳು ಬೈಠಕ್ ನೀಡುತ್ತಿದ್ದರು. ಒಂದೋ ಎರಡೋ ಬಾರಿ ಅವರು ಆ ಗುಂಪಿನೊಂದಿಗೆ ಮಾತನಾಡಿದರು ಮತ್ತು ಒಮ್ಮೆ, ಅವರೆಲ್ಲರನ್ನು ಪ್ರತ್ಯೇಕವಾಗಿ ಭೇಟಿಯಾದರು. ಕೊನೆಯ ಬೈಠಕ್‌ಗಳನ್ನು ನಾಲ್ಕು ದಿನಗಳಲ್ಲಿ ಹಂಚಿ ಮುಗಿಸಬೇಕೆಂಬ ಯೋಜನೆಯಿದ್ದರೂ, ಗುರುಗಳು ಡಿಸೆಂಬರ್ 6ರ ಶುಕ್ರವಾರ ಎಲ್ಲರಿಗೂ ಕೊನೆಯ ಬೈಠಕ್ ಕೊಡಲು ನಿರ್ಧರಿಸಿದರು. ಈ ಎಲ್ಲ ಬೈಠಕ್‌ಗಳನ್ನು ಮುಗಿಸಿ ನಂತರ ಪ್ರತಿಯೊಬ್ಬರಿಗೂ ಪ್ರಶಿಕ್ಷಕ ಪ್ರಮಾಣಪತ್ರಗಳನ್ನು ಹಸ್ತಾಂತರಿಸಿದ ನಂತರ, ತಾನು ಮಾಡಬೇಕೆಂದು ಯೋಜಿಸಿಕೊಂಡಿದ್ದ ಕೆಲಸವೆಲ್ಲವನ್ನೂ ಮಾಡಿದ ಮತ್ತು ಅಂದುಕೊಂಡಿದ್ದಕ್ಕಿಂತ ಮೊದಲೇ ಅದನ್ನು ಮಾಡಿ ಮುಗಿಸಿದ ಸಂತೃಪ್ತಿಯ ಭಾವವನ್ನು ಗುರುಗಳ ಮುಖದಲ್ಲಿ ಕಾಣಬಹುದಾಗಿತ್ತು.

**ಡಿಸೆಂಬರ್ 15, 2013 ರವಿವಾರ:** ರವಿವಾರದ ಸತ್ಸಂಗವನ್ನು ಸೋ. ಕಮಲೇಶ್‌ರವರು ನಡೆಸಿಕೊಟ್ಟರು ಮತ್ತು ನಂತರ ಒಂದು ಪುಟ್ಟ ಭಾಷಣವನ್ನು ನೀಡಿದರು. ಅಭ್ಯಾಸಿಗಳ ಮೇಲೆ ಪ್ರತಿಫಲಾಪೇಕ್ಷೆಯಿಲ್ಲದ ಗುರುಗಳ ಪ್ರೇಮ ಮತ್ತು ನಿರೀಕ್ಷೆಗಳಿಂದ ಕೂಡಿದ ನಮ್ಮ ಪ್ರೇಮದ ಬಗ್ಗೆ ಅವರು ಮಾತನಾಡಿದರು.

**ನಿದ್ರಾ ತಜ್ಞ:** ಗುರುಗಳು ಸುಮಾರು ಅರ್ಧಗಂಟೆಯನ್ನು ಅಮೇರಿಕೆಯಿಂದ ಬಂದ ಓರ್ವ 'ನಿದ್ರಾ ತಜ್ಞ' ವೈದ್ಯರೊಡನೆ ಕಳೆದರು. ಗುರುಗಳು ಅವರ ಕಾರ್ಯದ ಬಗ್ಗೆ ಕುತೂಹಲಿಯಾಗಿದ್ದರು. ದೇಹದ ಅನೇಕ ನ್ಯೂನತೆಗಳು ಹೇಗೆ ನಿದ್ರೆಯಲ್ಲಿ ಅಸ್ತವ್ಯಸ್ತತೆಯನ್ನು ಉಂಟುಮಾಡುತ್ತವೆಂಬುದನ್ನು ಆ ವೈದ್ಯರು ವಿವರಿಸಿದರು. ಮತ್ತು ಗುರುಗಳು ದಿನನಿತ್ಯ ತೆಂಗಿನನೀರನ್ನು ಸೇವಿಸಬೇಕೆಂದು ಅವರು ಹೇಳಿದರು. ಗುರುಗಳು ನಸುನಗುತ್ತ, "ನಾನು ತೆಂಗಿನ ನೀರನ್ನು ಇಷ್ಟಪಡುತ್ತೇನೆ ಮತ್ತು ನಾನು ಏನನ್ನು ಇಷ್ಟಪಡುತ್ತೇನೋ ಅದನ್ನು ಶಿಫಾರಸು ಮಾಡುವ ವೈದ್ಯರನ್ನೂ ಇಷ್ಟಪಡುತ್ತೇನೆ" ಎಂದರು. ಕೋಣೆಯಲ್ಲಿದ್ದ ಎಲ್ಲರೂ ಮನಸಾರೆ ನಕ್ಕುಬಿಟ್ಟರು.

**ಶ್ರೀಲಂಕಾ:** ಡಿಸೆಂಬರ್ ಮಧ್ಯಕಾಲದಲ್ಲಿ, ಮಣಪಾಕ್ಕಂನ ವಿಚಾರಸಂಕಿರಣಕ್ಕಾಗಿ ಶ್ರೀಲಂಕಾದಿಂದ ಬಂದ ಸುಮಾರು ಅರುವತ್ತು ಅಭ್ಯಾಸಿಗಳು ಗುರುಗಳನ್ನು. ಅವರು ಗುರುಗಳೊಂದಿಗೆ ಶ್ರೀಲಂಕಾದಲ್ಲಿ ಕೇಂದ್ರಗಳು ಬೆಳೆಯುತ್ತಿರುವ ಕಾರಣ ಹೆಚ್ಚಿನ ಪ್ರಶಿಕ್ಷಕರುಗಳ ಅಗತ್ಯವಿದೆಯೆಂದು ಹೇಳಿದರು. ಗುರುಗಳಿಗೆ ಸಾಕಷ್ಟು ಸಂತೋಷವಾಗಿತ್ತು.



**ಸೂರ್ಯನ ಬಿಸಿಲಿನಲ್ಲಿ ಅಧಿವೇಶನಗಳು:** ಗುರುಗಳು ನಿತ್ಯ ಹೊರಗೆ ಬಂದು ಕುಟೀರದ ಮುಂಭಾಗದಲ್ಲಿ ಅಥವಾ ಕೆಲವೊಮ್ಮೆ ಹಿಂಭಾಗದಲ್ಲಿ ಕುಳಿತುಕೊಳ್ಳುತ್ತಾರೆ. ಈ ಅವಧಿಗಳು ಕೆಲವೊಮ್ಮೆ ಚರ್ಚಾಮುಖಿಯಾಗಿರುತ್ತವೆ ಮತ್ತು ಉಳಿದ ಸಮಯ ಅವು ಮೌನಾವಧಿಗಳಾಗಿರುತ್ತವೆ. ಅದನ್ನು ಕುರಿತು ಗುರುಗಳು, "ನನಗೂ ನನ್ನ ಸುತ್ತಲೂ ಜನರಿರುವ ಅಗತ್ಯವಿರುತ್ತದೆ. ಬರೇ ಸೂರ್ಯನ ಬೆಳಕಲ್ಲ. ಹೃದಯ. ಅದು ಸೂರ್ಯನ ಬೆಳಕು, ಮಾನವ ಹೃದಯ ಮತ್ತು ಸ್ವಇಚ್ಛೆಯ ಒಂದು ಸಂಮಿಶ್ರಣ."

ಡಿಸೆಂಬರ್ 22ರಂದು ಗುರುಗಳಿಗೆ ಚರ್ಮದ ಕಸಿ ಮಾಡಲಾದುದರಿಂದ ಅದು ವಾಸಿಯಾಗಲು ಕೆಲದಿನಗಳ ಸಮಯ ಹಿಡಿಯಿತು.

**ಕ್ರಿಸ್‌ಮಸ್:** ಡಿಸೆಂಬರ್ 25, 2013: ಗುರುಗಳು ಬೇಗನೆ ಎದ್ದು ಮುಂಜಾನೆ 7 ಗಂಟೆಯ ಮೊದಲೇ ಸಿದ್ಧರಾಗಿದ್ದರು. ಅವರು ತುಂಬ ಉತ್ಸಾಹದಲ್ಲಿದ್ದು, ತನ್ನ ಸುತ್ತಲಿದ್ದವರಿಗೆಲ್ಲ ಕ್ರಿಸ್‌ಮಸ್ ಶುಭಾಶಯವನ್ನು ಹೇಳಿದರು. ಅವರು ಸತ್ಸಂಗವನ್ನು ನಡೆಸಲೆಂದು ಧ್ಯಾನಮಂದಿರಕ್ಕೆ ಹೋಗುವ ಯೋಜನೆಯನ್ನು ಮೊದಲು ಹಾಕಿಕೊಂಡಿದ್ದರೂ, ವೈದ್ಯರ ಸೂಚನೆಯ ಮೇರೆಗೆ ಅಲ್ಲಿಯೇ ಉಳಿದರು. ಗುರುಗಳು ಬೆಳಗಿನ ಉಪಾಹಾರವನ್ನು ಮುಗಿಸುತ್ತಿದ್ದಂತೆ ಹಜಾರದಲ್ಲಿ ಸೇರಿದ್ದ ನೂರಾರು ಅಭ್ಯಾಸಿಗಳಿಗಾಗಿ ಜಮಾಯಿಸಿದರು. ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಅವರು ಪ್ರತಿಯೊಬ್ಬರನ್ನೂ ಅಭಿವಾದಿಸಿ ನಂತರ, ಆಲಿಸುವುದು, ಅದರ ಅರ್ಥದ ಮೇಲೆ ಧ್ಯಾನಿಸುವುದು ಮತ್ತು ಕಲಿತುದನ್ನು ಜೀರ್ಣಿಸಿಕೊಳ್ಳುವುದರ ಕುರಿತಾಗಿ ಮಾತನಾಡಿದರು. ಅದಲ್ಲವಾದರೆ ನಾವು ಬರೇ ಸುಶಿಕ್ಷಿತರಾಗುತ್ತೇವೆ, ಎಂದೂ ಕಲಿಯುವುದಿಲ್ಲ ಎಂದರು. ಒಂದು ಗಂಟೆಯ ಸತ್ಸಂಗ, ತದನಂತರ 45 ನಿಮಿಷಗಳ ಭಾಷಣದಿಂದ ಇದೊಂದು ಸುದೀರ್ಘ ಕಾಲಾವಧಿಯಾಗಿದ್ದಿತು.



## ಜನವರಿ 2014

ಜನವರಿ 8ರಂದು ಗುರುಗಳು ಸೋ. ಕಮಲೇಶ್‌ರವರ ಹೊಸ ಮನೆಗೆ ಹೋದರು. ಅಭ್ಯಾಸಿಗಳು ದಾರಿಯುದ್ದಕ್ಕೂ ಸಾಲುಸಾಲಾಗಿ ನಿಂತಿದ್ದಂತೆ ಸೋ. ಕಮಲೇಶ್‌ರವರು ಗುರುಗಳ ಗಾಲಿಕುರ್ಚಿಯನ್ನು ನೂಕುತ್ತ ನಡೆದರು. ಗುರುಗಳು ರಿಬ್ಬನ್ ಕತ್ತರಿಸಿ, ಒಳಹೋಗಿ ಪ್ರಸಾದವನ್ನರ್ಪಿಸಿದರು. ಅವರನ್ನು ಸೋ. ಕಮಲೇಶ್‌ರವರು ಮನೆಯ ಒಳಗೆಲ್ಲ ಕರೆದುಕೊಂಡು ಹೋದರು. ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು. ಆದರೆ ಸತ್ಸಂಗದಲ್ಲಿ ಸುಮಾರು 35 ನಿಮಿಷಗಳ ಕಾಲ ಒಂದು ಮೊಬೈಲ್ ಫೋನ್ ಶಬ್ದಮಾಡುತ್ತ ಪ್ರತಿಯೊಬ್ಬರನ್ನು ತೊಂದರೆಗೀಡುಮಾಡಿದಾಗ, ಗುರುಗಳು ಆ ಕೂಡಲೆ ಸತ್ಸಂಗವನ್ನು ಮೊಟಕುಗೊಳಿಸಿದರು. ಗುರುಗಳು ಬೇಸರಗೊಂಡಿದ್ದರು ಮತ್ತು ಒಂದು ತೀಕ್ಷ್ಣವಾದ ಭಾಷಣವನ್ನಿತ್ತರು. ತದನಂತರ ಮಲಗುವ ಮನೆಯಲ್ಲಿ ಗುರುಗಳು, "ಬೈಠಕ್ ವಿಶೇಷತರದ್ದಾಗಿತ್ತು ಆದರೆ ನನಗೆ ಆ ಸೆಲ್‌ಫೋನ್‌ನಿಂದ

continued...







ತೊಂದರೆಯಾದ ಕಾರಣ ನಾನು ಬೈಠಕ್ಕನ್ನು ಮೊಟಕುಗೊಳಿಸಬೇಕಾಯಿತು” ಎಂದರು.

ಗುರುಗಳು ಕಮಲೇಶ್‌ರವರ ಮನೆಯಲ್ಲಿ ನಿಲ್ಲುವ ಯೋಜನೆಯನ್ನು ಹಾಕಿಕೊಂಡಿರಲಿಲ್ಲ. ಆದರೆ ತನ್ನ ಮನಸ್ಸನ್ನು ಬದಲಾಯಿಸಿ ಅಲ್ಲಿ ಕೆಲದಿನಗಳ ಕಾಲ ಉಳಿಯಲು ನಿರ್ಧರಿಸಿದರು. ಗುರುವನ್ನು ಮನೆಯಲ್ಲಿ ಉಳಿಸಿಕೊಳ್ಳುವ ಒಂದು ಸೂಕ್ಷ್ಮವಾದ ಮತ್ತು ಆಧ್ಯಾತ್ಮಿಕ ವಾತಾವರಣವನ್ನು ಮನೆಯಲ್ಲಿ ಕಾಪಿಡುವ ಅಗತ್ಯವನ್ನು ಅವರು ಒತ್ತಿಹೇಳಿದರು. ಅಲ್ಲಿರುವಾಗ ಗುರುಗಳು ಇರಾನ್, ಪಿತೋರ್‌ಘರ್ ಮುಂತಾದೆಡೆಗಳಿಂದ ಬಂದ ಅಭ್ಯಾಸಿಗಳನ್ನು ಭೇಟಿಯಾದರು. ಒಂದು ದಿನ ಸಾಯಂಕಾಲ, ಗುರುಗಳು ನೂರಕ್ಕಿಂತಲೂ ಹೆಚ್ಚುಮಂದಿ ತುಂಬಿಕೊಂಡಿದ್ದ ಹಜಾರದಲ್ಲಿ ಕುಳಿತರು ಮತ್ತು ಎಲ್ಲರೊಡನೆ ಮಾತನಾಡುತ್ತ ಸಂತೋಷಪಟ್ಟರು.

## ಜನವರಿ 14, 2014: ಪೊಂಗಲ್

ಗುರುಗಳು ಬೇಗನೆ ಸಿದ್ಧರಾಗಿ ತನ್ನ ಕೊಠಡಿಯಲ್ಲಿ ಕೆಲವರನ್ನು ಅಭಿವಾದಿಸಿದರು. ಅವರು ಧ್ಯಾನಮಂದಿರಕ್ಕೆ ಹೋಗುವಾಗ ತಾಳ್ಮೆಯಿಂದ ಕುಟೀರದ ದಾರಿಯುದ್ದಕ್ಕೂ ಸಾಲು ಸಾಲಾಗಿ ನಿಂತಿದ್ದ ಎಲ್ಲ ಅಭ್ಯಾಸಿಗಳನ್ನು ಅಭಿವಾದಿಸಿದರು. ತದನಂತರ ಒಂದು ಭಜನಾ ಕಾರ್ಯಕ್ರಮವಿತ್ತು. ಈ ಸತ್ಸಂಗದ ನಂತರ ಗುರುಗಳು ತೀರಾ ಬಳಲಿದ್ದರೂ ಸಹ ಹೊರಗೆ ಬಂದು ಸೂರ್ಯನ ಬಿಸಿಲಲ್ಲಿ ಕುಳಿತುಕೊಂಡರು. ಪಿತೋರ್‌ಗಢ್‌ನಿಂದ ಬಂದ ಸುಮಾರು 150 ಅಭ್ಯಾಸಿಗಳನ್ನು ಒಳಗೆ ಬಿಡಲಾಯಿತು. ನಂತರ ಒಮೇಗಾ ವಿದ್ಯಾರ್ಥಿಗೃಹದ ಸುಮಾರು 25 ಮಕ್ಕಳು ಬಂದು ಗುರುಗಳನ್ನು ಭೇಟಿಯಾದರು. ಗುರುಗಳು ಅಲ್ಲಿ ಕುಳಿತಿದ್ದ ಕಾರಣ, ತಿರುವಳ್ಳೂರು ಆಶ್ರಮದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕುಟೀರದ ಕೆಲ ರೇಖಾಚಿತ್ರಗಳನ್ನು ನೋಡಿ, ಗುರುಗಳು ಸೋ.ಪಿ.ಆರ್.ಕೃಷ್ಣ ಮತ್ತು ಸೋ. ಕಮಲೇಶ್‌ರವರೊಂದಿಗೆ ಕೆಲಕಾಲ ಆ ಬಗ್ಗೆ ಚರ್ಚೆ ಮಾಡಿದರು.

## ಬುಧವಾರ ಜನವರಿ 15: ತಿರುವಳ್ಳೂರಿನ ಕುಟೀರ – ಭೂಮಿ ಪೂಜೆ

ಮುಂಜಾನೆಯ ಧ್ಯಾನದ ನಂತರ ಗುರುಗಳು ಆಯಾಸವಾಗಿದ್ದ ಕಾರಣ ವೈದ್ಯರ ಶಿಫಾರಿಸ್ಸಿನಂತೆ, ತಿರುವಳ್ಳೂರಿನ ತಮ್ಮ ಪ್ರಯಾಣವನ್ನು ರದ್ದು ಪಡಿಸುವ ನಿರ್ಧಾರ









ಮಾಡಿದರು. ಅವರು ಸೋ. ಕಮಲೇಶ್‌ರವರನ್ನು ಅಲ್ಲಿಗೆ ಹೋಗಿ ಸತ್ಸಂಗ ಮತ್ತು ಭೂಮಿಪೂಜೆಗಳನ್ನು ನಡೆಸಿಕೊಟ್ಟು ಬರುವಂತೆ ಹೇಳಿದರು. ತಿರುವಳ್ಳೂರಿನಿಂದ ಹಿಂದಿರುಗಿದ ನಂತರ ಅಲ್ಲಿ 1500ಕ್ಕೂ ಹೆಚ್ಚು ಜನರು ಸೇರಿದ್ದಾಗಿಯೂ ಹಾಗು ಎಲ್ಲವು ಸುಸೂತ್ರವಾಗಿ ನಡೆಯಿತೆಂಬ ವರದಿಯನ್ನು ಅವರು ಗುರುಗಳಿಗೆ ತಿಳಿಸಿದರು.

## ಅವರ ಆರೋಗ್ಯ ಸ್ಥಿತಿ

ಇದೇ ತಿಂಗಳ ಮಧ್ಯಂತರದಲ್ಲಿ ಗುರುಗಳು ಶೀತ ಮತ್ತು ನೆಗಡಿಗಳಿಂದುಂಟಾದ ಸೋಂಕಿಗೆ ಒಳಗಾಗಿದ್ದುದರಿಂದ ಅವರು, "ಖಾಯಿಲೆಯಿಂದ ನರಳುವಾಗ ನಾನು ಜನರನ್ನು ಭೇಟಿ ಮಾಡದಿರುವುದೇ ಒಳ್ಳೆಯದು. ಅವರಿಗೆ ಸೋಂಕು ತಗುಲೀತೆಂಬ ಕಳವಳ ನನಗಾಗುತ್ತಿದೆ" ಎಂದು ಹೇಳಿದರು. ನಂತರ ಅವರು ಸಂಗೀತವನ್ನು ಆಲಿಸಿದರು ಹಾಗು ಅವರಿಗಾಗಿ ಪುಸ್ತಕಗಳನ್ನು ಓದಲಾಯಿತು.

## ಜನವರಿ 18 ರಿಂದ 24 ರವರೆಗೆ: ಅಂತರಾಷ್ಟ್ರೀಯ ವಿದ್ಯಾರ್ಥಿವೇತನ ತರಬೇತಿ ಕಾರ್ಯಕ್ರಮ

ತಮ್ಮ ಅಸ್ವಸ್ಥತೆಯ ನಡುವೆಯೂ ಗುರುಗಳು ನಡೆಸಿಕೊಟ್ಟ ಸುದೀರ್ಘವಾದ ಪ್ರಶಿಕ್ಷಕರ ತರಬೇತಿ ಕಾರ್ಯಕ್ರಮ ಇದಾಗಿದ್ದಿತು. ಗುರುಗಳು ಐಎಸ್‌ಟಿಪಿ ಅಭ್ಯರ್ಥಿಗಳನ್ನು ಭಾನುವಾರ ಭೇಟಿ ಮಾಡಿ ಅವರಿಗೆ ಒಂದು ಬೈಠಕ್ಕನ್ನು ನೀಡಿದರು. ನಂತರ ಗುರುಗಳು ಹೊಸದಾಗಿ ಅಣಿಯಾಗುತ್ತಿರುವ ಪ್ರಶಿಕ್ಷಕರಿಗೆ ಸುಮಾರು 30 ಅಭ್ಯರ್ಥಿಗಳನ್ನು ತರಪೇತುಗೊಳಿಸುವ ಕೆಲಸವನ್ನು ವಹಿಸಿಕೊಟ್ಟರು. ವಾರದ ಮೊದಲ ಭಾಗದಲ್ಲಿ ಗುರುಗಳು ಅಸ್ವಸ್ಥತೆಯಿಂದಿದ್ದರೂ ಅವರು ತಮ್ಮ ಈ ಕಾರ್ಯವನ್ನು ಶುಕ್ರವಾರದೊಳಗೆ ಮುಗಿಸಲು ಸಮರ್ಥರಾದರು. ಕೊನೆಯ ಬೈಠಕ್‌ನ ನಂತರ ಅವರು ಹೊಸದಾಗಿ ಅಣಿಗೊಂಡ ಎಲ್ಲ ಪ್ರಶಿಕ್ಷಕರುಗಳಿಗೆ ಒಬ್ಬರಾದ ಮೇಲೆ ಒಬ್ಬರಂತೆ ಪ್ರಸಾದ ಮತ್ತು ಪ್ರಶಿಕ್ಷಕರಾಗಿ ಕಾರ್ಯ ನಿರ್ವಹಿಸಲು ಅರ್ಹತಾ ಪತ್ರಗಳನ್ನು ನೀಡಿದರು. ಅವರು ಹೇಳಿದರು "ಕೆಲಸಕ್ಕೆ ತೊಂದರೆಯಾಗದಿರಲೆಂದು ಬೈಠಕ್ ಮುಗಿಯುವ ಪರ್ಯಂತ ಕೆಮ್ಮುವುದನ್ನು ತಡೆಹಿಡಿದಿದ್ದೆ."

## ಭಾನುವಾರ ಜನವರಿ 26, 2014

ಗುರುಗಳು ಸೋ. ಸಂಸ್ಕೃತ ಕಣ್ಣನ್‌ರವರಿಂದ ಭಗವದ್ಗೀತೆಯ ಬಗ್ಗೆ ಉಪನ್ಯಾಸವನ್ನು ಕೇಳಿದರು ಹಾಗು ಲವಲವಿಕೆಯಿಂದಿದ್ದರು. ಸಂಜೆಯ ಸತ್ಸಂಗದ ವೇಳೆಯಲ್ಲಿ ಆಶ್ರಮವನ್ನು ಸುತ್ತುಹಾಕಿ ಸಂಜೆ 5.45ಕ್ಕೆ ದಕ್ಷಿಣ ಆಫ್ರಿಕಾದ ಅಭ್ಯಾಸಿಗಳನ್ನು ಸಹ ತಮ್ಮ ಕುಟೀರದ ಹೊರಗಡೆ ಭೇಟಿ ಮಾಡಿ ಅಲ್ಲಿ ನೆರೆದಿದ್ದ ಅಭ್ಯಾಸಿಗಳೊಡನೆ ಕೆಲಕಾಲ ಮಾತುಕತೆ ನಡೆಸಿದರು.

## ಜನವರಿ 31, 2014 – ಚೀನಾ ದೇಶದ ಹೊಸವರ್ಷ

ಗುರುಗಳು ಮುಂಚಿತವಾಗಿಯೇ ಎಚ್ಚರಗೊಂಡಿದ್ದರು ಹಾಗು ಸಂಪೂರ್ಣವಾಗಿ ಸ್ವಸ್ಥರಾಗಿದ್ದರು. ಅವರು ಹೊರಗಡೆ ಕುಳಿತಿದ್ದರಿಂದ ಶಕ್ತಿ ತುಂಬಿ ಬಂದಂತಾಗಿ ಚೇತೋಹಾರಿಕೆಯಿಂದ ಬಹಳವೇ ಸಂತೋಷಪಟ್ಟರು. ಚೀನಾ ದೇಶದ ಅಭ್ಯಾಸಿಗಳು ಒಳಗೆ ಬಂದು ಗುರುಗಳಿಗೆ ಏನನ್ನೋ ಕೊಟ್ಟಾಗ ಗುರುಗಳು ಚೀನೀ ಭಾಷೆಯಲ್ಲಿಯೇ ಶುಭೋದಯ ಕೋರಿದರು.

ಮೂರು ಬಸ್ಸುಗಳಲ್ಲಿ ಅಭ್ಯಾಸಿಗಳು ತಿರುಪ್ಪೂರಿಗೆ ಹೊರಡಲು ಅನುವಾಗುತ್ತಿದ್ದರು. ಗುರುಗಳು ವಾಹನಗಳ ಉಸ್ತುವಾರಿ ವಹಿಸಿದ್ದ ವ್ಯಕ್ತಿಯನ್ನು ಭೇಟಿ ಮಾಡಿ ಅವನಿಗೆ ಪ್ರಯಾಣ ಬೆಳೆಸುವಾಗ ಕಣ್ಣಿನ ದೃಷ್ಟಿಯಿಂದಾಚೆಗೆ ಮರೆಯಾಗದಂತೆ ವಾಹನಗಳು ಒಂದನ್ನೊಂದು ಅನುಸರಿಸಿಕೊಂಡು ಹೋಗುವ ಅವಶ್ಯಕತೆಯ ಬಗ್ಗೆ ಕೆಲವು ನಿರ್ದೇಶನಗಳನ್ನು ಕೊಟ್ಟರು.

ಉಪಾಹಾರದ ನಂತರ ಗುರುಗಳು ಅಂಗಳದಲ್ಲಿ ಕೆನಡಾದ ಅಭ್ಯಾಸಿಗಳನ್ನು ಭೇಟಿ ಮಾಡಿದರು. ಈ ಅಭ್ಯಾಸಿಗಳು ತಮ್ಮದೇ ಆದ ಆಶ್ರಮ ದೊರೆತ ಕಾರಣ, ಕೇಕ್ ಕತ್ತರಿಸಿ ಸಂಭ್ರಮಿಸಿದರು. ಗುರುಗಳು ಎಲ್ಲರಿಗೂ ಅಭಿನಂದನೆ ಸಲ್ಲಿಸಿ ಎಲ್ಲರೊಡನೆ ಕೇಕ್ ಹಂಚಿಕೊಂಡರು.





## ಸಾಗರೋತ್ತರ ಸಮಾವೇಶ

ಜನವರಿ 7 ರಿಂದ 12, 2014, ಬಾಬೂಜಿ ಸ್ಮಾರಕ ಆಶ್ರಮ, ಮಣಪ್ಪಾಕ್ಕಂ

ಸಾಗರೋತ್ತರ ಕೇಂದ್ರಗಳಾದ ಆಸ್ಟ್ರೇಲಿಯ, ಫಿಜಿ, ನ್ಯೂ ಕೆಲೆಡೋನಿಯ ಮತ್ತು ನ್ಯೂಜ಼ಿಲೆಂಡ್‌ನ ಅಭ್ಯಾಸಿಗಳು ಜನವರಿ 7 ರಿಂದ 12 ರವರೆಗೆ ಮಣಪ್ಪಾಕ್ಕಂನ ಬಾಬೂಜಿ ಸ್ಮಾರಕ ಆಶ್ರಮದಲ್ಲಿ ಒಟ್ಟಾಗಿ ಸೇರಿದರು. ಸಮಾವೇಶಕ್ಕೆ ಮುಂಚಿತವಾಗಿ ಜನವರಿ 4 ರಿಂದ 6 ರವರೆಗೆ ಪ್ರಶಿಕ್ಷಕರ ಸಭೆ ನಡೆಯಿತು. ಗುರುಗಳು ತಮ್ಮ ಅನಾರೋಗ್ಯದ ಹೊರತಾಗಿಯೂ 4ನೇ ತಾರೀಕು 40 ಮಂದಿ ಪ್ರಶಿಕ್ಷಕರಿಗೆ ಸತ್ಸಂಗವನ್ನು ನಡೆಸಿಕೊಟ್ಟರು. ತದನಂತರ ಒಂದು ಹೃದಯಸ್ಪರ್ಶಿ ಭಾಷಣ ಮಾಡಿದ ಅವರು ಒಂದು ಗಂಟೆಯ ಕಾಲ ಅವರೊಡನೆ ಕಾಲ ಕಳೆದರು. ಸಭಾಂಗಣದೊಳಗೆ ನಡೆದ ಕಾರ್ಯಾಗಾರವು ಪ್ರಶಿಕ್ಷಕರಿಗೆ ಅತ್ಯಮೂಲ್ಯವಾದ ಸೂಕ್ಷ್ಮ ಅಂತರ್‌ದೃಷ್ಟಿಗೆ ಹಾದಿ ಮಾಡಿಕೊಟ್ಟಿತು.

ಜನವರಿ 7ನೇ ತಾರೀಕು ಆಸ್ಟ್ರೇಲಿಯ ಮತ್ತು ನ್ಯೂಜ಼ೀಲೆಂಡ್ ಎರಡೂ ದೇಶಗಳ 200ಕ್ಕೂ ಹೆಚ್ಚು ಅಭ್ಯರ್ಥಿಗಳಿದ್ದ ಸಾಗರೋತ್ತರ ಸಮಾವೇಶವನ್ನು ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯು ಉದ್ಘಾಟಿಸಿತು. ನೆರೆದಿದ್ದ ಅಭ್ಯರ್ಥಿಗಳಿಗನ್ನು ಉದ್ದೇಶಿಸಿ ಸೋ. ಕಮಲೇಶ್‌ರವರು ಮಾತನಾಡಿದರು. ಮಧ್ಯಾಹ್ನದ ವೇಳೆಯಲ್ಲಿ ವೈಯಕ್ತಿಕ ಪರ್ಯಾಲೋಚನೆಗಳು, ಬೈಠಕ್‌ಗಳು ಅಥವಾ ಪುಸ್ತಕದ ಮಳಿಗೆ ಹಾಗು ಗ್ರಂಥಾಲಯಗಳಿಗೆ ಭೇಟಿ ನೀಡುವ ಸಲುವಾಗಿ ಅವಕಾಶ ಮಾಡಿಕೊಡಲಾಗಿದ್ದಿತು. ಯುವ ಅಭ್ಯಾಸಿಗಳು ನಡೆಸಿಕೊಟ್ಟ ಒಂದು ಕಾರ್ಯಕ್ರಮವು ಅಭ್ಯರ್ಥಿಗಳಲ್ಲಿ ಹಿತಕರವಾದ ಬಾಂಧವ್ಯವನ್ನು ಸೃಷ್ಟಿಮಾಡುವಲ್ಲಿ ಸಹಕಾರಿಯಾಯಿತು. ಗುರುಗಳು ಆರೋಗ್ಯದ ಸಮಸ್ಯೆಯಿಂದ ಅವರು ಹಿನ್ನೆಲೆಯಲ್ಲಿ ಕಾರ್ಯನಿರತರಾಗಿದ್ದರೂ, ಅಭ್ಯಾಸಿಗಳು ಅಲ್ಲಿಗೆ ಪ್ರವೇಶಿಸಿದ ಮರುಕ್ಷಣದಿಂದಲೇ ಅವರ ಮಾರ್ಗದರ್ಶನದಲ್ಲಿ ಎಲ್ಲ ಕಾರ್ಯಕ್ರಮಗಳು ಪ್ರೇಮ ಭರಿತವಾಗಿರುವುದನ್ನು ಗ್ರಹಿಸಬಹುದಾಗಿತ್ತು.

10ನೇ ತಾರೀಖು ಸಂಜೆ ಸೋ. ಕಮಲೇಶ್‌ರವರು ಯುವ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರ ಸಂದೇಶ ಬಹಳ ಸ್ಪಷ್ಟವಾಗಿತ್ತು. "ನಮ್ಮ ನಿತ್ಯ ಜೀವನದ ಸಾಮಾನ್ಯ ಕೆಲಸ ಕಾರ್ಯಗಳ ನಡುವೆಯೂ ನಮಗೆ ಲಭ್ಯವಿರುವ ಸಮಯವನ್ನು ಆಧ್ಯಾತ್ಮಿಕ ಗುರಿಯೆಡೆಗೆ ಹೇಗೆ ಉಪಯೋಗಿಸಿಕೊಳ್ಳಬಹುದು - ಆಹಾರ ಸ್ವೀಕರಿಸುವಾಗ, ನಿದ್ರೆ ಮಾಡುವಾಗ ಹಾಗು ಸಂಭಾಷಿಸುತ್ತಿರುವಾಗ".

ದಿನಾಂಕ 11 ರಂದು, ಗುರುಗಳು ತಮ್ಮ ಅನಾರೋಗ್ಯದ ನಡುವೆಯೂ ತಮ್ಮ ಕುಟೀರದ ಅಂಗಣದಲ್ಲಿ ಅವರನ್ನು ಭೇಟಿ ಮಾಡಿ, ಸದಾಚಾರದ ನಡವಳಿಕೆಯ ಬಗ್ಗೆ ಮಾತನಾಡಿದ ನಂತರ ಅವರು ಅತ್ಯಂತ ಗಾಢವಾದ ಬೈಠಕ್ ಅನ್ನು ನೀಡಿದರು. ನ್ಯೂಜ಼ಿಲೆಂಡಿನ ಸೋದರಿ ಅಭ್ಯಾಸಿಗಳು ಮಾಓರಿಯಲ್ಲಿ ಒಂದು ಗೀತೆಯನ್ನು ಹಾಡಿದ ನಂತರ ಅವರು ತಮ್ಮ ಕಚೇರಿಗೆ ತೆರಳಿದರು. ಭಾನುವಾರದ ಬೆಳಗಿನ ಸತ್ಸಂಗದೊಂದಿಗೆ ಗುರುಗಳು ವೈಶಿಷ್ಟ್ಯಪೂರ್ಣ ಮುಕ್ತಾಯ ಹೇಳಿದಂತಿತ್ತು. ಸೋ. ಕಮಲೇಶ್‌ರವರು ತಮ್ಮ ಅಂತಿಮ ಭಾಷಣದಲ್ಲಿ ಅಭ್ಯಾಸಿಗಳು ತಮ್ಮ ತಮ್ಮ ಮನೆಗಳಿಗೆ ಹಿಂತಿರುಗಿದ ನಂತರ ನಮ್ಮ ಧ್ಯಾನದ ಸ್ಥಿತಿಯನ್ನು ಉಳಿಸಿಕೊಂಡು, ಸಮಯವನ್ನು ಉತ್ತಮವಾಗಿ ಉಪಯೋಗಿಸಿಕೊಳ್ಳುವ ಪ್ರಾಮುಖ್ಯತೆಯ ಬಗ್ಗೆ ಒತ್ತು ನೀಡಿ ಹೇಳಿದರು.



## ಆಫ್ರಿಕಾದ ಸಮಾವೇಶ – ಮಣಪ್ಪಾಕ್ಕಂ ಜನವರಿ 2014



"ನೀವು ಇಲ್ಲಿರಬಹುದು, ಇಲ್ಲದಿರಬಹುದು ಆದರೆ ನಾನು ನಿಮ್ಮೆಲ್ಲರೊಡನೆ ಇದ್ದೇನೆ, ಇದನ್ನು ನಂಬಿ!"

ಜನವರಿ 20ರ ವರೆಗೆ ಆಫ್ರಿಕಾದ ಬೋಟ್ಸ್‌ವಾನ, ಕ್ಯಾಮರೂನ್, ಈಜಿಪ್ಟ್, ಕೆನ್ಯ, ಮಡಗಾಸ್ಕರ್, ಮಾರಿಷಸ್, ಮೊರಾಕ್ಕೊ, ರೀಯೂನಿಯನ್, ದಕ್ಷಿಣ ಆಫ್ರಿಕ, ಟಾಂಜ಼ಾನಿಯ ಮತ್ತು ಉಗಾಂಡ ಸೇರಿದಂತೆ 163 ಪ್ರತಿನಿಧಿಗಳಲ್ಲಿ ಬಹುಮಟ್ಟಿಗೆ ಎಲ್ಲರೂ ಆಗಮಿಸಿದ್ದರು. ಪ್ರತಿದಿನ ಬೆಳಿಗ್ಗೆ 6.30, 9.00 ಮತ್ತು ಸಂಜೆ 5.00 ಗಂಟೆಗೆ ಒಟ್ಟು 3 ಸಮೂಹ ಸತ್ಸಂಗಗಳು ಮತ್ತು ಮಧ್ಯಾಹ್ನದ ವೇಳೆಯಲ್ಲಿ ವೈಯಕ್ತಿಕ ಬೈಠಕ್‌ಗಳು ಇದ್ದವು. ಇದರ ಜೊತೆಗೆ ಸಂಭಾಷಣೆಗಳು, ಗುರುಗಳ ವೀಡಿಯೊ ಬಿತ್ತರಿಕೆ, ಅಭ್ಯಾಸಿಗಳ ಮತ್ತು ಸಂಯೋಜಕರ ಕಾರ್ಯಾಗಾರಗಳು ಹಾಗು ಗುರುಗಳ ಭೇಟಿ ಕಾರ್ಯಕ್ರಮಗಳು ಸಹ ಇದ್ದವು.

ಸೋ. ರಾಜೇಶ್ ರಾಥೋಡ್ ಮತ್ತು ಸೋ. ಕಮಲೇಶ್‌ರವರು ಅಭ್ಯರ್ಥಿಗಳೊಡನೆ ಮಾತನಾಡಿದರು. ಈ ಮಾತುಕತೆಗಳು ಮುಂದಿರುವ ಮಾರ್ಗದ ಬಗ್ಗೆ ಮಾರ್ಗದರ್ಶನ ಹಾಗು ವಿವರಣೆಗಳನ್ನು ಪಡೆದುಕೊಳ್ಳಲು ಅವಕಾಶ ನೀಡಿದವು.

ಅಭ್ಯಾಸಿಗಳು ಹಿಂದಿನ ದಿನ ಗುರುಗಳು ಅಂತರರಾಷ್ಟ್ರೀಯ ಸಮ್ಮೇಳನಗಳ ಕಾರ್ಯಕಾರಿ ಸಮಿತಿಯೊಡನೆ ಮಾತನಾಡುತ್ತ, ಪ್ರತಿಯೊಬ್ಬರೂ ಒಂದೊಂದು ಮೇಣದ ಬತ್ತಿಯನ್ನು ಹಚ್ಚಬಲ್ಲ ಬೆಂಕಿ ಕಡ್ಡಿಯಂತಾಗಬೇಕೆಂದು, ನಮ್ಮ ನಡೆ ನುಡಿಗಳಿಂದ ಇತರರು ಪರಿವರ್ತನೆಗೊಳ್ಳುವಂತೆ ನಾವು ನಮ್ಮನ್ನು ಪರಿವರ್ತಿಸಿಕೊಳ್ಳಬೇಕಾಗಿದೆ ಎಂದು ಹೇಳಿದ್ದ ಭಾಷಣವನ್ನು ಕೇಳಿದರು.

ಎಲ್ಲ ಅಭ್ಯರ್ಥಿಗಳನ್ನು ಸಮಗ್ರತೆಯೆಡೆಗಿನ ಗುರಿಯುಳ್ಳ ಹಾಗು ಪರಸ್ಪರ ವಿಚಾರ ವಿನಿಮಯದ ದೃಷ್ಟಿಯಿಂದ ಸಣ್ಣ ಸಣ್ಣ ಗುಂಪುಗಳನ್ನಾಗಿ ವಿಭಾಗಿಸಲಾಯಿತು. ಪರಸ್ಪರ ಗುರುತು ಪರಿಚಯಗಳ ನಂತರ, ಪ್ರತಿಯೊಬ್ಬ ಪ್ರತಿನಿಧಿಯು ತಮ್ಮ ಬಗ್ಗೆ ಮೂರು ಸರಳ ಪ್ರಶ್ನೆಗಳಿಗೆ ಉತ್ತರವನ್ನು ನೀಡಬೇಕಾಗಿತ್ತು. ಮನುಷ್ಯ ಜೀವದ ನೆಲೆಯ ಅಡಿಯಲ್ಲಿ, ಈ ಒಂದು ಪ್ರಯೋಗವು ಭಾವನಾತ್ಮಕವಾಗಿದ್ದು ಮನಮುಟ್ಟುವಂತಿತ್ತು. ಕಣ್ಣೀರು ಬರುವಂತಹ ಹಾಸ್ಯ ಸಂಯೋಜನೆ, ಆಫ್ರಿಕಾದ ಸಹೋದರ ಸಹೋದರಿಯರ ನಡುವಿನ ಬಾಂಧವ್ಯಗಳು ಸಮೀಪಕ್ಕೆ ಬೆಸೆದು ಬರುವಂತಾಗಿ ಅದು ಈಗ ಎಲ್ಲರಿಗು ಎದ್ದು ಕಾಣುವಂತಿತ್ತು.

ಹೊಸ ಅಭ್ಯಾಸಿಗಳನ್ನು ಮೊದಲ ದಿನ ಗುರುಗಳಿಗೆ ಪರಿಚಯ ಮಾಡಿಕೊಡಲಾಯಿತು. ಮತ್ತೊಂದು ದಿನ ಗುರುಗಳು ಸಾಮೂಹಿಕ ಸತ್ಸಂಗವನ್ನು ನಡೆಸಿಕೊಟ್ಟರು. ಜನವರಿ 26 ಭಾನುವಾರದಂದು, ಸಂಜೆಯ ಸತ್ಸಂಗದ ಅನಂತರ, ಅವರನ್ನು ಪೂಜ್ಯ ಗುರುಗಳ ಭೇಟಿಗಾಗಿ ಆಮಂತ್ರಿಸಲಾಯಿತು. ಈ ಸಮಾವೇಶದಲ್ಲಿ ಗುರುಗಳು ಆಫ್ರಿಕಾದ ಪ್ರತಿನಿಧಿಗಳ ಕೆಲವು ಅಂಜಿಕೆ ಮತ್ತು ಕಾಳಜಿಗಳನ್ನು ಗಮನದಲ್ಲಿಟ್ಟು ಮಾತನಾಡಿದರು.

## ಲಾಲಾಜಿ ಮಹಾರಾಜರ ಜನ್ಮದಿನೋತ್ಸವ – ಭಾರತ


ಜೋಧ್‌ಪುರ್


ಮುಂಬೈ


ಭಿಲ್ವಾರ


ಕೊಲ್ಕಾತಾ


ಒಸ್ಮಾನಾಬಾದ್


ಲಖನೌ


ಹುಬ್ಬಳ್ಳಿ


ಚಿಕಲಿ


ವರನ್‌ಗಾಂವ್


ಗುಲ್ಬರ್ಗ

## ಅಖಿಲ ಭಾರತೀಯ ಪ್ರಬಂಧ ಘಟನಾವಳಿ 2013

ಪ್ರತಿ ವರ್ಷದಂತೆ ಅಂತರರಾಷ್ಟ್ರೀಯ ಯುವ ದಿನದ ಸಂಸ್ಮರಣೆಯ ಅಂಗವಾಗಿ ಶ್ರೀ ರಾಮಚಂದ್ರ ಮಿಷನ್ ಹಾಗು ಭೂತಾನ್ ಮತ್ತು ಭಾರತ ದೇಶಗಳಲ್ಲಿನ ವಿಶ್ವ ಸಂಸ್ಥೆಯ ಸುದ್ಧಿ ಸಂಸ್ಥೆ (ಯುಎನ್‌ಐಸಿ) ಯಿಂದ ಆಯೋಜಿಸಲ್ಪಟ್ಟ ಅಖಿಲ ಭಾರತೀಯ ಪ್ರಬಂಧ ಸ್ಪರ್ಧೆಯ 2013 ರ ಘಟನಾವಳಿಯು, ಈ ಎರಡೂ ಸಂಸ್ಥೆಗಳ ನಡುವಿನ 9 ನೇ ವರ್ಷದ ಪಾಲುಗಾರಿಕೆಗೆ ಗುರುತಾಯಿತು. ಮೊದಲ ವಿಭಾಗಕ್ಕೆ (9 ರಿಂದ 12 ನೇ ತರಗತಿಯವರೆಗೆ) ಕೊಡಲಾದ ವಿಷಯ, ಗುರುಗಳು ಲಾಲಾಜಿ ಸ್ಮಾರಕ ಒಮೆಗಾ ವಿದ್ಯಾ ಸಂಸ್ಥೆಗಳ ವಿದ್ಯಾರ್ಥಿಗಳೊಡನೆ ಮಾತನಾಡುತ್ತ "ಹೃದಯಗಳು ತೆರೆದುಕೊಂಡಾಗ ಮಾತ್ರವೇ ಮನಸ್ಸು ತೆರೆದು ಕೊಳ್ಳಬಲ್ಲದು" ಎಂದು ಹೇಳಿದ ಒಂದು ಉಕ್ತಿಯೇ ಆಗಿತ್ತು. ಎರಡನೇ ಗುಂಪಿಗೆ (ಪದವಿ ಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ) ಕೊಟ್ಟಿದ್ದ ವಿಷಯ, ಹೆನ್ರಿ ಡೇವಿಡ್ ಥೊರೆಯೊರವರ ವಿಚಾರ ಪ್ರಚೋದಕ ಹೇಳಿಕೆಯಾಗಿತ್ತು – "ನೀವು ಏನನ್ನು ನೋಡುವಿರಿ ಎಂಬುದಕ್ಕಿಂತ ಏನನ್ನು ಕಾಣುವಿರಿ ಎಂಬುದೇ ಮುಖ್ಯ." ಅಭ್ಯರ್ಥಿಗಳು ವಿಷಯದ ಬಗ್ಗೆ ಸಂಶೋಧನೆ ಮತ್ತು ಚರ್ಚೆ ಮಾಡಲು ಮುಕ್ತರಾಗಿದ್ದು, ಅವರು ತಮ್ಮ ಅಂತರ್ ಪ್ರಜ್ಞೆಯನ್ನು ಸ್ವಯಂ ವಿಮರ್ಶೆಗೆ ಒಳಪಡಿಸಿಕೊಂಡು ವಿಷಯದ ಮೇಲೆ ತಮ್ಮ ತಮ್ಮ ಅನಿಸಿಕೆಗಳ



ಶಿವಗಂಗೆ


ಬ್ಯಾವರ್


ಬಳ್ಳಾರಿ


ಕೊಲ್ಕಾತಾ


ಔರಂಗಾಬಾದ್



ರಾಂಚಿ

ಮೂಲಕ ಅವರು ಹೊರತರಲೆಂಬ ಉದ್ದೇಶ ಹೊಂದಿದೆ. ಈ ವರ್ಷ 12,193 ವಿದ್ಯಾಸಂಸ್ಥೆಗಳಿಂದ 1,78,589 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮೊದಲ ಗುಂಪಿನ ಅತಿ ಶ್ರೇಷ್ಠ ಬಹುಮಾನವನ್ನು ಡಾ. ಎ.ಎನ್. ಖೊಸ್ಲ ಡಿಎವಿ ಸಾರ್ವಜನಿಕ ಶಾಲೆ, ರೂರ್ಕೆಲ (ವಲಯ 14, ಒಡಿಶಾ)ದ ಹರ್ಷಿತಾ ಚಾರಿ ಮತ್ತು ಎರಡನೆ ಗುಂಪಿನಲ್ಲಿ ಜಯಪುರದ, ಜಯಪುರ ಆಡಳಿತ ಪ್ರಬಂಧ ಸಂಸ್ಥೆಯ ಅಂಕುರ್ ಚಕ್ರವರ್ತಿ (ವಲಯ 7, ರಾಜಾಸ್ಥಾನ, ಇವರುಗಳು ಗೆದ್ದುಕೊಂಡಿದ್ದಾರೆ. ಅವರಿಗೆ UNIC ನಿರ್ದೇಶಕರು ಮತ್ತು SRCMನ ಅಧ್ಯಕ್ಷರ ಸಹಿ ಪಡೆದ ಪ್ರಶಸ್ತಿಪತ್ರ ಹಾಗು ಟ್ರೋಫಿಯನ್ನು ನೀಡಲಾಯಿತು. ಶ್ರೇಷ್ಠವಾದ ಎರಡು ವಿಜೇತರ ಪ್ರಬಂಧಗಳನ್ನು SRCMನ ಜಾಲತಾಣದಲ್ಲಿ ಹಾಕಲಾಗಿದೆ.

ಈ ವರ್ಷ, ಪ್ರಬಂಧ ಸ್ಪರ್ಧೆಯನ್ನು SRCMನ ಎಲ್ಲ ವಲಯಗಳಲ್ಲೂ (2013 ರಲ್ಲಿ 30 ವಲಯಗಳು) ನಡೆಸಲಾಯಿತು. ನಮ್ಮ ಅನೇಕ ಕೇಂದ್ರಗಳಲ್ಲಿ ನಡೆದ ಬಹುಮಾನ ವಿತರಣೆ ಕಾರ್ಯಕ್ರಮಗಳಲ್ಲಿ ಬಹುಮಾನ ಪಡೆದ ಶಾಲೆಗಳು ಮತ್ತು ವಲಯ ಬಹುಮಾನ ವಿಜೇತರಷ್ಟೇ ಅಲ್ಲದೆ, ಹಿಂದೆಂದು ಕೇಳರಿಯದಷ್ಟು ಪೋಷಕರು ಹಾಗು ಶಾಲಾ ಶಿಕ್ಷಕರು ಭಾಗವಹಿಸಿದ್ದುದು ಕಂಡು ಬಂತು.

**ಘಟನಾವಳಿಯ ವರದಿಗಳು ಈ ಕೆಳಗಂಡ ಕೇಂದ್ರಗಳಿಂದ ಬಂದಿವೆ:**

ದಕ್ಷಿಣ ತಮಿಳುನಾಡು (ಪರಮಕುಡಿ, ಕೋವಿಲ್‌ಪಟ್ಟಿ, ತಿರುಪ್ಪೂರ್, ಗೋಪಿಚೆಟ್ಟಿಪಾಳ್ಯಮ್, ಶಿವಗಂಗೈ), ಮಹಾರಾಷ್ಟ್ರ (ಚಿಖಲಿ, ಅಹಮದ್ ನಗರ, ಮುಂಬೈ, ಒಸ್ಮನಾಬಾದ್, ಪುಣೆ, ಪೈಠಣ್, ಔರಂಗಾಬಾದ್), ಉತ್ತರಪ್ರದೇಶ (ಬರೈಲಿ, ಹರ್ದೋಯಿ, ಮೀರತ್, ಮೊರದಾಬಾದ್, ಲಕ್ನೋ, ಷಹಜಹಾನ್‌ಪುರ), ಉತ್ತರ ಕರ್ನಾಟಕ (ಗುಲ್ಬರ್ಗ, ಹುಬ್ಬಳ್ಳಿ, ಬಸವಕಲ್ಯಾಣ, ಬಳ್ಳಾರಿ, ಬೆಳಗಾವಿ), ಕೇರಳ (ಅಲುವ, ಪಾಲಕ್ಕಾಡ್), ರಾಂಚಿ, ದೆಹಲಿ, ಪಶ್ಚಿಮ ಬಂಗಾಳ (ಸಿಲಿಗುರಿ, ಖರಗ್‌ಪುರ, ರಾಣಿಗಂಜ್, ಕೋಲ್‌ಕತ್ತಾ), ರಾಜಾಸ್ಥಾನ (ಬೀವಾರ್, ಬಾಲಿ), ಆಂಧ್ರ ಪ್ರದೇಶ (ಕರ್ನೂಲು) ಮತ್ತು ಪಂಜಾಬ (ಜಲಂಧರ್).


ರಾನಿಗಂಜ್


ಕೋವಿಲ್‌ಪಟ್ಟಿ


ಮೊರಾದಾಬಾದ್


ಬಹೇರಿ


ಪೈಠಣ್


ಪಾಲಕ್ಕಾಡ್


ಪುಣೆ


ಝೀರೋ


ಸಿಲಿಗುರಿ

# ಮಕ್ಕಳ ಕಾರ್ಯಕ್ರಮಗಳು






## ಪುಲ್‌ಗಾಂವ್ ಆಶ್ರಮ, ಮಹಾರಾಷ್ಟ್ರ

ಡಿಸೆಂಬರ್ 25, 2013ರಂದು, 140 ಮಕ್ಕಳಿಗಾಗಿ ಕಾರ್ಯಕ್ರಮವೊಂದನ್ನು ಹಮ್ಮಿಕೊಳ್ಳಲಾಗಿತ್ತು. ಸಾಂಟಾಕ್ಲಾಸ್‌ನ ವೇಷಧಾರಿ ಅಭ್ಯಾಸಿಯೊಬ್ಬರು ಮಕ್ಕಳನ್ನು ಸ್ವಾಗತಿಸಿದರು. ಗುರುಗಳು ಒಮೆಗಾ ಶಾಲೆಯ ಮಕ್ಕಳೊಂದಿಗಿನ ವಿಡಿಯೋದಿಂದ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಚಾರಿತ್ರ್ಯ ನಿರ್ಮಾಣ ಮತ್ತು ನೈತಿಕ ಜೀವನಕ್ಕೆ ಅಳವಡಿಸಿಕೊಳ್ಳಬಹುದಾದ ಮೌಲ್ಯಗಳನ್ನು ಬಿಂಬಿಸುವ ಆಟಗಳು ಮತ್ತು ರಚನಾತ್ಮಕ ಕ್ರಿಯೆಗಳಲ್ಲಿ ಮಕ್ಕಳನ್ನು ತೊಡಗಿಸಲಾಯಿತು. ಪಾಲಕರಿಗಾಗಿ ಸ್ವಾಗತಸ್ಥಳದ ವ್ಯವಸ್ಥೆ ಮಾಡಲಾಗಿದ್ದಿತು. ಮಾಳಿಗೆ ಮೇಲಿನ ತೋಟಗಾರಿಕೆಯ ಪ್ರಾತ್ಯಕ್ಷಿಕೆಯೊಂದಿಗೆ ಪೂರ್ಣದಿನದ ಕಾರ್ಯಕ್ರಮವು ಮುಕ್ತಾಯವಾಯಿತು. ಕೊನೆಯಲ್ಲಿ ಮಕ್ಕಳೆಲ್ಲರೂ ಮೊಗದಲ್ಲಿ ತೇಜಸ್ಸು ಮತ್ತು ಮುಂದಿನ ಕಾರ್ಯಕ್ರಮದಲ್ಲಿ ಮತ್ತೊಮ್ಮೆ ಬೇಗನೆ ಭಾಗವಹಿಸುವ ತವಕವನ್ನು ಹೊತ್ತು ಹಿಂತಿರುಗಿದರು.

## ಲುಧಿಯಾನ ಆಶ್ರಮ, ಪಂಜಾಬ್

ಜನವರಿ 5ರಂದು ಸುಮಾರು ಇಪ್ಪತ್ತೆರಡು ಮಕ್ಕಳು ತೋಟಗಾರಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಮಕ್ಕಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಅವರಿಗೆ ವಾಣಿಜ್ಯ ಬೆಳೆಗಳಿಗೆ ಬಳಸುವ ಕೀಟನಾಶಕಗಳು ಮತ್ತು ರಾಸಾಯನಿಕ ಗೊಬ್ಬರಗಳಿಂದ ಆರೋಗ್ಯಕ್ಕೆ ಹಾನಿಯಾಗುವುದು ಎಂದು ತಿಳಿಸಿಕೊಡಲಾಯಿತು. ಅವರು ಮಣ್ಣನ್ನು ಹದಗೊಳಿಸಿ ಕುಂಡಗಳಿಗೆ ತುಂಬಿ, ಅನೇಕ ವಿಧದ ಸಸಿಗಳು ಮತ್ತು ಬೀಜಗಳನ್ನು ಹಾಕಿ, ಅವುಗಳನ್ನು ವ್ಯವಸ್ಥಿತವಾಗಿ ಇಟ್ಟರು. ಲಾಕ್ಷಣಿಕ ಕಲಿಕೆಯಿಂದ ಅವರ ಶಬ್ದಭಂಡಾರ ಹೆಚ್ಚಿಸಿಕೊಳ್ಳಲು ಹಾಗು 'ಹಸಿರೇಕೆ ಬೇಕು' ಎಂಬ ವಿಷಯದ ಬರವಣಿಗೆಯಿಂದ ಅವರು ನಿರಾಕರಣೆ, ಮರುಬಳಕೆ, ಪುನರ್ಭರ್ತಿ, ಪುನರ್ಬಳಕೆ ಮತ್ತು ಮಿತಬಳಕೆಯ ಬಗೆಗೆ ತಮ್ಮ ವಿಚಾರಗಳನ್ನು ವ್ಯಕ್ತಪಡಿಸಲು ಸಹಕಾರಿಯಾಯಿತು.

## ಜಬಲ್‌ಪುರ ಆಶ್ರಮ, ಮಧ್ಯಪ್ರದೇಶ

ಡಿಸೆಂಬರ್ 22–25, 2013ರಲ್ಲಿ ನಡೆದ ಚಳಿಗಾಲದ ಶಿಬಿರದಲ್ಲಿ ಅರವತ್ತೈದು ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ಆಧ್ಯಾತ್ಮಿಕ ಪರಿಸರದಲ್ಲಿ ಮೌಲ್ಯಾಧಾರಿತ ಶಿಕ್ಷಣವನ್ನು ಒದಗಿಸುವಂತೆ ರಚಿಸಲಾಗಿತ್ತು. ಶ್ರದ್ಧಾಳು ಸ್ವಯಂಸೇವಕರ ತಂಡವು ಮುಂದಾಳತ್ವ ವಹಿಸಿ ಇದನ್ನು ಯೋಜಿಸಿತ್ತು. ಅಭ್ಯಾಸಗಳು, ಆಟಗಳು, ತೋಟಗಾರಿಕೆ, ಕರಕುಶಲ ಕಲೆಗಳು, ರಸಪ್ರಶ್ನೆ, ನೀತಿಕಥೆಗಳು, ಸ್ವಯಂಸೇವಕರು ತಯಾರಿಸಿದ ಪ್ರೇರಣಾತ್ಮಕ ಪ್ರಸ್ತುತಿಗಳು, ಸ್ಪೂರ್ತಿಭರಿತ ಚಲನಚಿತ್ರಗಳು ಈ ಚಟುವಟಿಕೆಯ ಅಂಗವಾಗಿದ್ದುವು. ತದನಂತರ ಮಕ್ಕಳು ತಾವೇ ಆಯೋಜಿಸಿದ ಸುಂದರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಇದರೊಂದಿಗೆ ಮಕ್ಕಳ ಆರೋಗ್ಯ ತಪಾಸಣೆಯನ್ನು ಸಹ ನಡೆಸಲಾಯಿತು.

## ಕೊಲ್ಕಾತಾ, ಪಶ್ಚಿಮ ಬಂಗಾಳ

ಕೊಲ್ಕಾತಾದ ಬಾಬೂಜಿ ಮೆಮೋರಿಯಲ್ ಆಶ್ರಮದಲ್ಲಿ ಹತ್ತನೇ ವಾರ್ಷಿಕೋತ್ಸವವನ್ನು ಡಿಸೆಂಬರ್ 29, 2013ರಂದು ಅರ್ಧದಿನದ ಕ್ರೀಡಾಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಉದ್ಯಾನದಲ್ಲಿ ಮಕ್ಕಳ ನೃತ್ಯಪ್ರದರ್ಶನದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ನಂತರ ಎಲ್ಲ ವಯೋಮಾನದವರಿಗಾಗಿ ವಿವಿಧ ಕ್ರೀಡಾ ಚಟುವಟಿಕೆಗಳನ್ನು ನಡೆಸಲಾಯಿತು. ಮಕ್ಕಳಿಗಾಗಿ ನಡೆಸಿದ ತಡೆಯೋಟ, ಮೂರು ಕಾಲಿನ ಓಟ ಮತ್ತು ಸಂಗೀತಕುರ್ಚಿಯಾಟಗಳು ಪ್ರಮುಖ ಆಕರ್ಷಣೆಗಳಾಗಿದ್ದುವು. ಹತ್ತು ನಿಯಮಗಳಾಧಾರಿತ ಆಟದಲ್ಲಿ ಬಹುತೇಕ ಎಲ್ಲರೂ ಭಾಗವಹಿಸಿದರು. ಬಹುಮಾನ ವಿತರಣೆಯ ನಂತರದ ಭೋಜನದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.









## ಯುವ ಕಾರ್ಯಕ್ರಮಗಳು

### ಯುವ ಕೂಟ, ಅಲುವ, ಕೇರಳ

ವಲಿಯಪರಂಬು, ಕೋಡುಂಗಲೂರ್, ಎರ್ನಾಕುಲಂ, ಅಂಬಲೂರ್, ಕಲಡಿ, ತ್ರಿಶೂರು, ಪುಳನಿ ಮತ್ತು ಅಲುವಾದ ಯುವಾಭ್ಯಾಸಿಗಳು ಫೆಬ್ರುವರಿ 15 ಮತ್ತು 16ರಂದು ವಲಯಾಶ್ರಮದಲ್ಲಿ ಸಭೆ ಸೇರಿದರು. ಇಂತಹ ಕೂಟಗಳಿಂದ ಯುವಜನರ ನಿರೀಕ್ಷಣೆ ಏನಿರುತ್ತದೆಯೆಂಬುದನ್ನು ತಿಳಿದುಕೊಳ್ಳಲು ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದಿತು. ಸಮೂಹ ಚರ್ಚೆಗಳು ಮತ್ತು ಸಂವಾದಗಳಿಂದ, ಸಹಜಮಾರ್ಗದ ವಿವಿಧ ಅಂಶಗಳು, ಯುವಕರನ್ನು ನಿಯಮಿತ ಸಾಧನೆ ಮಾಡಲು ಪ್ರೇರೇಪಿಸಿ ತನ್ಮೂಲಕ ಇತರರನ್ನು ಪದ್ಧತಿಯೆಡೆಗೆ ಸೆಳೆಯುವುದು ಮತ್ತಿತರ ಅಂಶಗಳನ್ನು ಚರ್ಚಿಸಲಾಯಿತು. ಅಪರಾಹ್ನದಂದು, ಗುರುಗಳ 'ಹೃದಯದಿಂದ ಆಲಿಸಿ' ಎಂಬ ಉಪನ್ಯಾಸವನ್ನು ಕೇಳಿದ ನಂತರ, ಪ್ರಶ್ನೋತ್ತರವನ್ನು ನಡೆಸಲಾಯಿತು. ವಲಯ ಪ್ರಮುಖರಾದ ಸೋ. ಮೋಹನ್‌ರವರು ತಮ್ಮ ಉಪನ್ಯಾಸದಲ್ಲಿ ಧ್ಯಾನ ಮತ್ತು ಸಹಜಮಾರ್ಗ ಸಾಧನೆಗಳು ಓರ್ವ ವ್ಯಕ್ತಿಯ 'ಆತ್ಮಧರ್ಮ'ದ ಜೊತೆಗೂಡಿ ನಡೆಯುತ್ತವೆ ಎಂದು ಹೇಳಿದರು ಹಾಗು ಮುಂಜಾನೆಯ ಚರ್ಚೆಯಲ್ಲಿ ಉದ್ಭವಿಸಿದ ಅನೇಕ ಪ್ರಶ್ನೆಗಳಿಗೆ ಸ್ಪಷ್ಟನೆ ನೀಡಿದರು.

### ವಲಯ ಯುವ ಸಭೆ, ಗೌಹಾಟಿ, ಅಸ್ಸಾಂ

ಗೌಹಾಟಿ ಆಶ್ರಮದಲ್ಲಿ ಜನವರಿ 11 ಮತ್ತು 12ರಂದು 'ಪರಿವರ್ತನೆ' ಆಧಾರಿತ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಅಸ್ಸಾಂ, ನಾಗಾಲ್ಯಾಂಡ್, ಮಣಿಪುರ ಮತ್ತು ಮೇಘಾಲಯದ ಐವತ್ತೆರಡು ಅಭ್ಯಾಸಿಗಳು ಪಾಲ್ಗೊಂಡರು. ಹಿರಿಯ ಅಭ್ಯಾಸಿಗಳಿಂದ ಉಪನ್ಯಾಸಗಳು, ಸಮೂಹಚರ್ಚೆಗಳು, ಆತ್ಮಪರಿಶೀಲನೆ ಮತ್ತು ಪ್ರಶ್ನೋತ್ತರ ಕಾರ್ಯಕ್ರಮಗಳು ಸಹಜಮಾರ್ಗದ ಬಗೆಗೆ ಮತ್ತಷ್ಟು ತಿಳಿದುಕೊಳ್ಳಲು ಸಹಾಯಕವಾದುವು. ಸಭೆಯ ಕೊನೆಯಲ್ಲಿ ಭಾಗಿಗಳಿಗೆ ತಮ್ಮ ಅನುಭವಗಳನ್ನು ಅವರ ದಿನಚರಿಯಲ್ಲಿ ಬರೆದುಕೊಳ್ಳಲು ತಿಳಿಸಲಾಯಿತು. ಜೀವನದಲ್ಲಿ ಸಮರ್ಥ ಗುರುವಿನ ಅಗತ್ಯವನ್ನು ಎತ್ತಿತೋರಿಸುವ ಕಿರುಚಿತ್ರವನ್ನು ಪ್ರದರ್ಶಿಸಲಾಯಿತು. ಇಂತಹ ಮತ್ತಷ್ಟು ಸಭೆಗಳು ಹಾಗು ಕ್ರೆಸ್ಟ್ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಭಾಗಿಗಳು ಉತ್ಸುಕರಾಗಿದ್ದರು.

### ಬರೋಡ

ಡಿಸೆಂಬರ್ 29, 2013ರಂದು ವಾರ್ಷಿಕ ಯುವ ಕುಟವನ್ನು ಬರೋಡದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸುಮಾರು ಎಪ್ಪತ್ತೈದು ಯುವ ಅಭ್ಯಾಸಿಗಳು ಪಾಲ್ಗೊಂಡಿದ್ದರು. ಎಲ್ಲರಿಗಾಗಿ 'ನಿಧಿಶೋಧನೆ'ಯನ್ನು ನಡೆಸಲಾಗಿದ್ದು, ಅಭ್ಯಾಸಿ ಸೋದರಿಯರಿಗಾಗಿ 'ಕಚೇರಿಯಲ್ಲಿ ಸ್ವಯಂರಕ್ಷಣೆ'ಯನ್ನು ತಿಳಿಸಲಾಯಿತು. ಕಾರ್ಯಕ್ರಮಗಳ ತರುವಾಯ, ಶಿಬಿರಾಗ್ನಿಯ ಬಳಿ ಅಭ್ಯಾಸಿಯ ಸಂಗೀತವನ್ನು ಆಸ್ವಾದಿಸಿದರು. ಒಂಭತ್ತು ಗಂಟೆಯ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು.

### ದೆಹಲಿ

ಗಾಜ್ಹಿಯಾಬಾದ್, ನೋಯ್ಡಾ, ಗುರ್‌ಗಾಂವ್ ಮತ್ತು ದೆಹಲಿಯ ಅಭ್ಯಾಸಿಗಳಿಗಾಗಿ ವಾರಾಂತ್ಯದ ವಸತಿ ಕಾರ್ಯಕ್ರಮವನ್ನು ಆರ್.ಕೆ.ಪುರಂನ ಆಶ್ರಮದಲ್ಲಿ 2014ರ ಜನವರಿ ತಿಂಗಳಿನ ಸತತ ಎರಡು ವಾರಾಂತ್ಯಗಳಂದು ಆಯೋಜಿಸಲಾಗಿತ್ತು. ಪದ್ಧತಿಯ ಆಳಜ್ಞಾನ ಪಡೆಯಲು ಹಾಗು ಅವರ ವೈಯಕ್ತಿಕ ಸಾಧನೆಯಲ್ಲಿ ಉತ್ಸಾಹ ಸೃಷ್ಟಿಸಲು ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಆತ್ಮಪರಿಶೀಲನಾ ಚಟುವಟಿಕೆಗಳು, ಹಂಚಿಕೊಳ್ಳುವಿಕೆ ಮತ್ತು ಸಮೂಹಚರ್ಚೆಗಳು ಸಾಧನೆಯ ವಿವಿಧ ಅಂಶಗಳ ಬಗ್ಗೆ ಗಾಢ ಅರ್ಥ ಮೂಡಿಸಿದವು. ಅವರು ತಮ್ಮನ್ನು ಸ್ವಯಂಸೇವೆಯಲ್ಲಿ ಸಹ ತೊಡಗಿಸಿಕೊಂಡರು. ಸಂಜೆ, ಕೆಲವರು ಭಜನಗಳನ್ನು ಹಾಡಿದರು. ಉಪನಿಷತ್ ಗಂಗಾ ಸರಣಿಯ ಒಂದು ಕಂತನ್ನು ಪ್ರದರ್ಶಿಸಲಾಯಿತು. ಭಾಗಿಗಳು ತೋರಿದ ಶಿಸ್ತು, ಉತ್ಸಾಹ ಹಾಗು ಸ್ವಯಂಸೇವಕರ ಶ್ರದ್ಧೆಯು ಮನಮುಟ್ಟಿತು.



## ಜಂಟಿ ಕಾರ್ಯದರ್ಶಿಗಳ ಪೂರ್ವೋತ್ತರ ಕೇಂದ್ರಗಳ ಪ್ರವಾಸ

ಜಂಟಿ ಕಾರ್ಯದರ್ಶಿಗಳಾದ ಸೋ. ಎ.ಪಿ. ದುರೈರವರು ಜನವರಿ 15ರಿಂದ 25, 2014ರವರೆಗೆ ಅಸ್ಸಾಂ ಮತ್ತು ಅರುಣಾಚಲ ಪ್ರದೇಶಗಳಲ್ಲಿನ ಕೇಂದ್ರಗಳ ಪ್ರವಾಸ ಕೈಗೊಂಡರು. ಅವರು 16ನೇ ಬೆಳಿಗ್ಗೆ ಗೌಹಾಟಿಗೆ ಆಗಮಿಸಿ ಮುಂದಿನ ಕೆಲದಿನಗಳಲ್ಲಿ ಗೌಹಾಟಿ, ಟೇಂಗಾ ಕಣಿವೆ ಉಪಕೇಂದ್ರ, ಬೊಂಡಿಲಾ ನಹರಲಾಗುನ್, ಝೀರೊ, ಪಾಸಿಘಾಟ್, ಉತ್ತರ ಲಖಿಂಪುರ ಮತ್ತು ದಿಬ್ರುಗಢಗಳಿಗೆ ಭೇಟಿ ನೀಡಿದರು. ಕೇಂದ್ರದಲ್ಲಿ ಅಭ್ಯಾಸಿಗಳೊಡನೆ ಉಪಯುಕ್ತ ಚರ್ಚಾಸತ್ರಗಳನ್ನು ನಡೆಸಲಾಯಿತು ಹಾಗು ಮುಕ್ತಸಭೆಗಳನ್ನು ಆಯೋಜಿಸಲಾಗಿತ್ತು.

ಸೋ.ಈಶ್ವರಪ್ರಸಾದ್‌ರವರು (ವಲಯಪ್ರಮುಖ), ಸೋ ಅರುಣ್ ಪಾಠಕ್, ಸೋ. ಧನಿಚಂದ್(ವಲಯ ಪ್ರಮುಖರು) ಮತ್ತು ಸೋ. ಜ್ಯೋತ್ಸ್ನಾರವರು ಈ ಪ್ರವಾಸದಲ್ಲಿ ಅವರೊಂದಿಗಿದ್ದರು. ಅಭ್ಯಾಸಿಗಳನ್ನು ಹಾಗು ಪ್ರಶಿಕ್ಷಕರನ್ನು ಗುರುಗಳ ನಿಕಟ ತರುವ ವಿಷಯಕ್ಕೆ ಮಹತ್ವ ನೀಡಲಾಯಿತು ಹಾಗು 19ರಂದು ನಡೆದ ಪ್ರಶಿಕ್ಷಕರ ಸಭೆಯಲ್ಲಿಯೂ ಚರ್ಚಿಸಲಾಯಿತು. ಪ್ರಶಿಕ್ಷಕರ ಎರಡೂ ಸಭೆಗಳಲ್ಲಿ ತಮ್ಮ ಸಾಧನೆಯ ಬಗ್ಗೆ ತಿಳಿವಳಿಕೆ ಹಾಗು ಗುರುಗಳೊಂದಿಗಿನ ಸಂಬಂಧವನ್ನು ಬಲಪಡಿಸುವ ವಿಷಯಗಳಿಗೆ ಪ್ರಾಧಾನ್ಯವನ್ನೀಯಲಾಯಿತು. ಈ ತಂಡದವರು ಗುರುಗಳು ತಮ್ಮ ಮೇಲೆ ಸದಾ ಲಕ್ಷ್ಯವನ್ನಿಟ್ಟು ತಾವೆಲ್ಲಿ ಹೋದರೂ ಹೆಜ್ಜೆಹೆಜ್ಜೆಗೂ ತಮಗೆ ಮಾರ್ಗದರ್ಶನ ಮಾಡುತ್ತಿರುವುದನ್ನು ಅನುಭವಿಸಿದರು.

## ಯು–ಕನೆಕ್ಟ್ ಕಾರ್ಯಕ್ರಮ, ಜೈಪುರ, ರಾಜಸ್ಥಾನ



ವಿಶ್ವವಿದ್ಯಾಲಯ ಹಾಗು ಮಹಾವಿದ್ಯಾಲಯ ಮುಂತಾದವುಗಳ ಮೂಲಕ ಸಹಜಮಾರ್ಗ ಪದ್ಧತಿಯನ್ನು ಉಪಕ್ರಮಿಸಿ ಯುವಜನರಲ್ಲಿ ಬದಲಾವಣೆ ತರುವುದೇ ಈ ಕಾರ್ಯಕ್ರಮದ ಉದ್ದೇಶವಾಗಿತ್ತು. ಜನವರಿ 19ರಂದು ಪೂಜ್ಯ ಗುರುಗಳು ಮತ್ತು ಸೋ. ಕಮಲೇಶ್‌ರವರ ಮಾರ್ಗದರ್ಶನದಲ್ಲಿ 'ಮಾಲಿಬಾ' ಎಂಬ ಯು–ಕನೆಕ್ಟ್ ಕಾರ್ಯಕ್ರಮದ ಸಫಲತೆಯ ಕಥೆಯನ್ನು ಸ್ವಯಂಸೇವಕರಲ್ಲಿ ಹಂಚಿಕೊಳ್ಳಲಾಯಿತು. ಈ ಕಾರ್ಯಕ್ರಮವನ್ನು ಸುವ್ಯಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸುವ ಕಾರ್ಯವಿಧಾನವನ್ನು ತಿಳಿಸಲಾಯಿತು. ಒಬ್ಬ ಅಭ್ಯಾಸಿಯು ತಮ್ಮ ಸಂಸ್ಥೆಯಲ್ಲಿ ಇದರ ಉಪಕ್ರಮವನ್ನು ಕೈಗೊಂಡಿದ್ದಾರೆ. ಮುಂಬರುವ ಜುಲೈ ತಿಂಗಳಿನಲ್ಲಿ ಹೊಸ ಸತ್ರ ಆರಂಭವಾದಾಗ ಕಾಲೇಜುಗಳನ್ನು ಸಂದರ್ಶಿಸುವಲ್ಲಿ ಇದು ಉಪಯುಕ್ತ ಅನುಭವಗಳನ್ನು ನೀಡಬಹುದಾಗಿದೆ.

## ಪ್ರಾಂತೀಯ ಸಭೆ: ಕೋಲ್ಕಾತಾ, ಪಶ್ಚಿಮ ಬಂಗಾಳ

ಡಿಸೆಂಬರ್ 21 ಮತ್ತು 22, 2013ರಂದು ಎರಡು ದಿನದ ಒಕ್ಕೂಟವೊಂದನ್ನು ಯೋಜಿಸಲಾಗಿತ್ತು. ಬಂದೇಲ್, ರಾಣಿಗಂಜ್, ಖರಗ್‌ಪುರ, ಕೃಷ್ಣನಗರ್, ಆಸನ್ಸೋಲ್, ಚಿತ್ತರಂಜನ್, ಬುರನ್‌ಪುರ ಕೂಚ್‌ಬಿಹಾರ್ ಮತ್ತು ದಾರ್ಜಿಲಿಂಗ್ ಮೊದಲ್ಗೊಂಡು ಪಶ್ಚಿಮಬಂಗಾಳದ ವಿವಿಧ ಭಾಗಗಳಿಂದ ಸುಮಾರು 60 ಅಭ್ಯಾಸಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮವು ಬಂಗಾಳಿ ಭಾಷೆಯಲ್ಲಿ ನಡೆಸಲಾಗಿದ್ದು, ಸಾಧನೆಯ ವಿವಿಧ ಅಂಗಗಳಿಗೆ ವಿಶೇಷವಾಗಿ ಮತ್ತು ನಿಯಮಗಳಿಗೆ ಹೆಚ್ಚಿನ ಒತ್ತು ನೀಡಲಾಯಿತು. ಈ ಸಭೆಯು ಅಭ್ಯಾಸಿಗಳ ಚಿಂತನೆ ಮತ್ತು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯಕವಾಯಿತು. ಬಂಗಾಲಿ ಅನುವಾದಕ ತಂಡಕ್ಕೆ ಮುಂದಿನ ಭಾರೀ ಕೆಲಸಕ್ಕೆ ಒಟ್ಟಾಗಿ ಯೋಜನೆಗಳನ್ನು ಹಾಕಿಕೊಳ್ಳಲು ಕೂಡ ಸಹಕಾರಿಯಾಯಿತು. ಈ ಎರಡು ದಿನದ ಸಭೆಯಲ್ಲಿ ಆನಂದ ಮತ್ತು ಬಂಧುಭಾವದ ವಾತಾವರಣವಿದ್ದಿತು. ಎಲ್ಲರೂ ಹೊಸ ಚೈತನ್ಯ ಮತ್ತು ಉತ್ಸಾಹ ಪಡೆದು ಹಿಂತಿರುಗಿದರು.






## ಸಂಯೋಜಕರ ವಿಕಾಸ ಕಾರ್ಯಕ್ರಮ

### ಪನ್ವೇಲ್ ಆಶ್ರಮ, ಮುಂಬೈ

ಡಿಸೆಂಬರ್ 12–16, 2013ರಂದು ನಡೆಸಲಾದ ಈ ಕಾರ್ಯಕ್ರಮದಲ್ಲಿ ಸಮಸ್ತ ಮಹಾರಾಷ್ಟ್ರದಿಂದ 50 ಅಭ್ಯಾಸಿಗಳು ಉಪಸ್ಥಿತರಿದ್ದರು. ಸಂಯೋಜನೆಯನ್ನು ನಮ್ಮ ನಿತ್ಯದ ಜೀವನದಲ್ಲಿ ಒಂದು ಉಪಕರಣವನ್ನಾಗಿ ಅನ್ವಯಿಸಿಕೊಳ್ಳಬೇಕೆಂದು ಭಾಗಿಗಳಿಗೆ ತಿಳಿಸಲಾಯಿತು. "ಸಂಯೋಜನೆ ಹಾಗು ಭ್ರಾತೃತ್ವ" ವಿಷಯದ ಮೇಲಿನ ಕಾರ್ಯಾಗಾರಗಳು ಭಾಗಿಗಳಿಗೆ ಸಂಯೋಜನಾ ಕಲೆಯನ್ನು, ಆತ್ಮಶೋಧನೆ, ಆಲಿಸುವುದು ಹಾಗು ಹೃತ್ಪೂರ್ವಕವಾಗಿ ಮಾತನಾಡುವುದನ್ನು ಕಲಿಸಿದುವು. GITP ಬಗೆಗಿನ ಕಾರ್ಯಾಗಾರಗಳು ಸಂಯೋಜನೆಯ ಸಿದ್ಧ ಅನುಭವಗಳನ್ನಿತ್ತವು. ಗುರುಗಳು ನೀಡಿದ ಈ ಸದವಕಾಶವನ್ನು ತುಂಬು ಹೃದಯದಿಂದ ಸ್ವೀಕರಿಸಬೇಕೆಂಬ ಕೇಂದ್ರ ಪ್ರಮುಖರ ಮನವಿಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

# ಝೀರೊ ಆಶ್ರಮ, ಅರುಣಾಚಲ ಪ್ರದೇಶ

## ಪ್ರಭಾ ಕೇಂದ್ರ





ಅರುಣಾಚಲ ಪ್ರದೇಶದ ಕೆಳ ಸುಬಾನ್ಸಿರಿ ಜಿಲ್ಲೆಯ ಮುಖ್ಯಾಲಯವಾದ ಝೀರೊವು ಐವತ್ತು ಸಾವಿರ ಅಡಿ ಎತ್ತರದ ಮೇಲೆ ಸ್ಥಿತವಾಗಿದೆ. ಇದು ವಿಸ್ತಾರವಾದ ಗುಡ್ಡಗಾಡು ಪ್ರದೇಶವಾಗಿದ್ದು ಆಶ್ಚರ್ಯಕರ ನೈಸರ್ಗಿಕ ದೃಶ್ಯವನ್ನು ಪ್ರದರ್ಶಿಸುತ್ತದೆ. ಝೀರೊವು ರಾಜ್ಯದ ರಾಜಧಾನಿಯಾದ ಇಟಾನಗರದಿಂದ ಸುಮಾರು 180 ಕಿ.ಮೀ. ಮತ್ತು ಆಸಾಮ ರಾಜ್ಯದ ಉತ್ತರ ಲಖೀಮಪುರದ ಹತ್ತಿರ, ಹಾಗು ಸಮೀಪದ ವಿಮಾನ ನಿಲ್ದಾಣವಾದ ಲಿಲಾಬರಿಯಿಂದ 176 ಕಿ.ಮೀ. ದೂರದಲ್ಲಿದೆ. ಇಲ್ಲಿಯ ಹವಾಮಾನ ಚಳಿಗಾಲದಲ್ಲಿ ಅತೀ ತಂಪಾಗಿಯೂ ಹಾಗು ಬೇಸಿಗೆಯಲ್ಲಿ ಸಾಧಾರಣವಾಗಿರುತ್ತದೆ. ಝೀರೋ ಪ್ರಸ್ತಭೂಮಿಯ ಜನಸಂಖ್ಯೆ 25000ವಾಗಿದ್ದು 'ಅಪಟನಿ' ಎಂಬ ಸ್ಥಳೀಯ ಬುಡಕಟ್ಟು ಜನರ ವಾಸಸ್ಥಾನವಾಗಿದೆ. ಇವರು ಡೋನ್ಯಿ–ಪೊಲೋ ಎಂದು ಕರೆಯಲಾದ ಸೂರ್ಯ ಮತ್ತು ಚಂದ್ರ ದೇವರನ್ನು ಪೂಜಿಸುತ್ತಾರೆ.

1985 ರಲ್ಲಿ ಅರುಣಾಚಲ ಪ್ರದೇಶದಲ್ಲಿಯ ತೋಟಗಾರಿಕೆ ಇಲಾಖೆಯಲ್ಲಿ ಕೆಲಸಮಾಡುತ್ತಿರುವ ಸೋ. ಎ.ಓ. ತಿವಾರಿಯವರು ವರ್ಗಾಯಿತರಾಗಿ ಇಲ್ಲಿಗೆ ಬಂದರು. 1986ರ ಸೆಪ್ಟೆಂಬರ್ ತಿಂಗಳಲ್ಲಿ, ಒಂದು ಸಂಜೆ ಗುಡ್ಡದ ಮೇಲೆ ತಿರುಗಾಡುತ್ತಿರುವಾಗ ಒಮ್ಮಿಂದೊಮ್ಮೆ ಧ್ಯಾನಕ್ಕೆ ಕೂರಬೇಕೆನಿಸಿತು. ಆಗ ಅವರು ತಮ್ಮ ಪ್ರೇಮದ ದ್ಯೋತಕವಾಗಿ ಇಲ್ಲೊಂದು ಆಶ್ರಮವನ್ನು ನಿರ್ಮಿಸಬೇಕೆಂದು ನಿರ್ಣಯಿಸಿದರು. 1987ರಲ್ಲಿ ಸಂಪೂರ್ಣ ಗುಡ್ಡದ ಮೇಲ್ಭಾಗಕ್ಕೆ ಬೇಲಿ ಹಾಕಿಸಲಾಯಿತು. ನಂತರ ಇಲ್ಲಿ ಇತರ ಪೂಜಾಸ್ಥಾನಗಳೂ ಬಂದು ನೆಲೆಸಿದವು. ಆ ನಂತರ ಅವರು ಮನೆಗಳಿಗೆ ಭೇಟಿನೀಡಿ, ಜನರಲ್ಲಿ ಸಹಜ ಮಾರ್ಗದ ತತ್ವವನ್ನು ಹರಡಿಸಲು ಪ್ರಾರಂಭಿಸಿದರು. ಜನರ ಅಭಿರುಚಿಯನ್ನು ಕಂಡು, 1992ರ ನಂತರ ಸೋ. ಪುರುಷೋತ್ತಮ ಅಗರ್‌ವಾಲ್(ಉ.ಲಖೀಂಪುರ), ಸೋ. ಈಶ್ವರ ಪ್ರಸಾದ ಅಗರ್‌ವಾಲ್ (ತಿನ್ಸುಖಿಯಾ), ಮತ್ತು ಕೆ.ಬಿ. ಚಕ್ರಬೊರ್ತಿ (ಇಟಾನಗರ) ಅವರನ್ನು ಅಭ್ಯಾಸಿಗಳಿಗೆ ಸಹಾಯ ಮಾಡಲು ವಿನಂತಿಸಿಕೊಂಡರು.

ಸೋ. ತಿವಾರಿಯವರ ಮನೆಯಲ್ಲಿ ಅಭ್ಯಾಸಿಗಳ ಸಂಖ್ಯೆ ಬೆಳೆದಾಗ, ಒಂದು ಆಶ್ರಮದ ಆವಶ್ಯಕತೆಯಿದೆ ಎಂದೆನಿಸಿತು. ಈ ಮೊದಲೇ ಸೂಚಿಸಲಾದ ಭೂಭಾಗವನ್ನು, ಡಿ. 12 ನೇ ಸಪ್ಟೆಂಬರ್ 1993 ರಂದು SRCMಗೆ ಔಪಚಾರಿಕವಾಗಿ ನಿಗದಿಪಡಿಸಲಾಯಿತು. ಗುರುಗಳು ನಿಯೋಜಿಸಿದ ಸ. ಈಶ್ವರ ಪ್ರಸಾದರವರು, ಜುಲೈ 4, 1994ರಂದು, ಆಶ್ರಮವನ್ನು ಕಟ್ಟಲು ಅನುಮತಿಯನ್ನಿತ್ತರು. ಈ ಪ್ರಕಲ್ಪವು ಬಹು ದೂರದ ಹಾಗು ಗುಡ್ಡಗಾಡಿನ ಪ್ರದೇಶವಾದುದರಿಂದ ಬಹಳ ಕ್ಲಿಷ್ಟಕರವಾಗಿದ್ದರೂ, ಅಭ್ಯಾಸಿಗಳ ಶುದ್ಧಪ್ರೇಮ ಹಾಗು ಧೃಢ ಸಂಕಲ್ಪಗಳಿಂದಾಗಿ, ಈ ಆಶ್ರಮವನ್ನು ಕಟ್ಟಲು ಸಾಧ್ಯವಾಯಿತು.

ಸೆಪ್ಟೆಂಬರ್ 14, 1996ರಂದು, ಮಿಷನ್ನಿನ ಆಗಿನ ಕಾರ್ಯದರ್ಶಿಗಳಾದ ಸೋ. ಎಸ್.ಎ. ಸರ್ನಾಡರವರು ಉದ್ಘಾಟಿಸಿದರು. ಸಮೀಪದ ಕೇಂದ್ರಗಳಿಂದ ಸುಮಾರು ಎಪ್ಪತ್ತು ಅಭ್ಯಾಸಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಜುಲೈ 2003ರಲ್ಲಿ, ಸೋ.ಯು.ಎಸ್. ಬಾಜಪಾಯಿಯವರು ಈ ಆಶ್ರಮಕ್ಕೆ ಭೇಟಿ ನೀಡಿದರು. ಈ ಭೂಮಿಯು ಮಂದಿರ ಸಮಿತಿಯಿಂದ ಮಿಷನ್ನಿಗಾಗಿ ನಿಗದಿ ಪಡಿಸಲಾಗಿದ್ದರೂ ಸಹ, ಶಾಸನಬದ್ಧವಾಗಿ ಮಂಜೂರಾತಿಯನ್ನು ಪಡೆಯಲು ಅರುಣಾಚಲಪ್ರದೇಶ ಸರಕಾರಕ್ಕೆ 2000ನೇ ಸಾಲಿನಲ್ಲಿ ಅರ್ಜಿಯನ್ನು ಸಲಿ ್ಲಸಲಾಯಿತು ಹಾಗು 1890 ಚ.ಮೀ. ಭೂಭಾಗವನ್ನು ಸರಕಾರ ನಿಗದಿಪಡಿಸಿತು.

ಆಶ್ರಮವು ಎರಡು ಅಂತಸ್ತಿನ ಕಟ್ಟಡವಾಗಿದ್ದು ವಾಸಸ್ಥಾನಕ್ಕೆಂದು ಉಪಯೋಗಿಸುತ್ತಿರುವ ಪ್ರದೇಶವು ನೆಲಮಹಡಿಯಲ್ಲಿ 122 ಚ.ಮೀ ಮತ್ತು ಮೊದಲ ಅಂತಸ್ತಿನ 128.38 ಚ.ಮೀ ಸ್ಥಳದಲ್ಲಿ ಶಯನಗೃಹ, ಅತಿಥಿಗೃಹ, ಭೋಜನ ಮತ್ತು ಕುಳಿತುಕೊಳ್ಳುವ ಸ್ಥಳದೊಂದಿಗೆ, ಸ್ನಾನಗೃಹ ಮತ್ತು ಅಡುಗೆಕೋಣೆಯೊಂದಿಗಿನ ಗುರುಗಳ ಕೋಣೆಯಿದೆ.




ಧ್ಯಾನಮಂದಿರವು CGI ತಗಡಿನ ಛಾವಣಿಯುಳ್ಳ 119 ಚ.ಮೀ ವಿಸ್ತಾರದ ಅರೆ–ಶಾಶ್ವತ ಕಟ್ಟಡವಾಗಿದೆ. ಪಕ್ಕದ ಗೋಡೆಗಳು ಬಿದಿರಿನ ಪಟ್ಟಿಗಳಿಂದ ಹೆಣೆಯಲಾದ ದೊಡ್ಡ ಹಾಳೆಗಳಿಂದ ಮಾಡಲಾಗಿದೆ. ಈಗಿನ ಅಭ್ಯಾಸಿಗಳ ಸಂಖ್ಯೆ 80ಕ್ಕೂ ಮೀರಿದ್ದು, ಭಾನುವಾರದ ಸತ್ಸಂಗದಲ್ಲಿ 20–25ರವರೆಗೆ ಇರುತ್ತದೆ. ಝೀರೊ ಆಶ್ರಮವು ಅರುಣಾಚಲ ಪ್ರದೇಶದ ದೂರದೂರದ ಭಾಗಗಳಲ್ಲಿ ಮಿಷನ್ನನ್ನು ಹಬ್ಬಿಸುವ ಉದ್ದೇಶಕ್ಕಾಗಿ ಉಪಯುಕ್ತವಾಗಿದೆ.

To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2014 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.